ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 36 | ಸೆಪ್ಟೆಂಬರ್ 7, 1980 | ಬೆಲೆ : 50 ಪೈಸೆ

ಜನತಂತ್ರದ ದಮನದತ್ತ

ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವು ಅಗತ್ಯ ಸೇವಾ ಮಸೂದೆಯನ್ನು ತರಲು ಪ್ರಯತ್ನಿಸುತ್ತಲಿರುವಾಗ ರಾಜ್ಯದಾದ್ಯಂತ ಆಗಸ್ಟ್ 18ರಂದು ಸಾರ್ವತ್ರಿಕ ಮುಷ್ಕರವೂ, ಹೆಚ್ಚುಕಡಮೆ ರಾಜ್ಯದಾದ್ಯಂತ ಬಂದ್ ಕಾರ್ಯಾಚರಣೆಯೂ ನಡೆದು ಕಾರ್ಮಿಕವರ್ಗ ಮತ್ತು ಜನತೆ ಕರಾಳ ಶಾಸನದ ವಿರುದ್ಧ ಪ್ರತಿಭಟಿಸಿತು.

ಈ ಚಾರಿತ್ರಿಕ ಪ್ರತಿಭಟನೆಯನ್ನು ನೋಡಿದ ಮೇಲಾದರೂ ಕರಾಳ ಶಾಸನವನ್ನು ಜಾರಿಗೊಳಿಸುವ ಪ್ರಯತ್ನವನ್ನು ಕೈಬಿಡುವುದರ ಬದಲು, ರಾಜ್ಯದ ಮುಖ್ಯಮಂತ್ರಿ ಗುಂಡೂರಾಯರು ಸ್ಥಾನಬದ್ಧತಾ ಕಾಯ್ದೆಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರುವ ಅಭಿಪ್ರಾಯವನ್ನು ನವದೆಹಲಿಯಲ್ಲಿ ವ್ಯಕ್ತಪಡಿಸಿರುವರು. ಕಾರ್ಮಿಕರನ್ನು ಸಂಘಟಿಸಿ ಮುಷ್ಕರದಲ್ಲಿ ತೊಡಗಿಸುವವರ ಮೇಲೂ ಇದನ್ನು ಉಪಯೋಗಿಸಲಾಗುವುದು ಎಂದೂ ಹೇಳಿರುವರಾಗಿ ವರದಿಯಾಗಿದೆ

ಗುಂಡೂರಾಯರ ಈ ಕ್ರಮವು ಜನತಂತ್ರದ ಮೇಲೆ, ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ನಡೆಸುವ ನೇರ ಆಕ್ರಮಣವಾಗಿದೆ. ಕಾಂಗ್ರೆಸ್ ಸರಕಾರದ ವಿಫಲತೆಯಿಂದ ಕಾರ್ಮಿಕವರ್ಗ ಮತ್ತು ಜನತೆ ಹೋರಾಟದ ಹಾದಿಯನ್ನು ಅನುಸರಿಸುತ್ತಲಿರುವಾಗ ಕಾರ್ಮಿಕರ ಸಂಘಟನೆ ಮತ್ತು ಹೋರಾಟ ಹಾಗೂ ಜನತೆಯ ಚಳುವಳಿಗಳನ್ನು ಹತ್ತಿಕ್ಕಲು ನಡೆಸುವ

ಸಂಪಾದಕೀಯ

ಕುತಂತ್ರವಾಗಿದೆ. ಸರಕಾರವು ಈ ಕ್ರಮವನ್ನು ಅನುಸರಿಸಿದ್ದೇ ಆದರೆ ಸಂಘಟಿತ ಕಾರ್ಮಿಕವರ್ಗ, ಅದರಲ್ಲೂ ಸಿ ಐ ಟಿ ಯು.ವಿನಂತಹ ಹೋರಾಟಗಾರ ಸಂಘಟನೆಗಳು ಮೊದಲು ಬಲಿಯಾಗಬಹುದು, ಸರಕಾರದ ಉದ್ದೇಶವು ಹಾಗೆಯೇ ಇದೆ ಎಂಬುದರಲ್ಲಿ ಸಂಶಯವಿಲ್ಲ.

ಆದರೆ ಈಗಾಗಲೇ ಕರ್ನಾಟಕ ರಾಜ್ಯದ ಕಾರ್ಮಿಕವರ್ಗ ಮತ್ತು ಜನತೆ ಎಚ್ಚೆತ್ತಿದ್ದಾರೆ. ರಾಷ್ಟ್ರದ ಹಲವಾರು ರಾಜ್ಯಗಳಲ್ಲಿ ಛಿದ್ರಕಾರಿ, ಸಂಕುಚಿತ ರಾಷ್ಟ್ರೀಯವಾದಿ ಮತ್ತು ಕೋಮು ಶಕ್ತಿಗಳು ಸಕ್ರಿಯವಾಗಿದ್ದು ಜನರ ಗಮನವನ್ನು ಬೇರೆಡೆಗೊಯ್ಯುತ್ತಲಿರುವಾಗ, ರಾಜ್ಯದ ರೈತರು ಮತ್ತು ಕಾರ್ಮಿಕರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ, ಸರಕಾರದ ವೈಫಲ್ಯತೆಯ ವಿರುದ್ಧ ಹೋರಾಡುತ್ತಿದ್ದಾರೆ. ಗುಂಡೂರಾವ್ ಸರಕಾರವು ಜನತಂತ್ರವನ್ನು ಹಂತ ಹಂತವಾಗಿ ಕಬಳಿಸಲು ನಡೆಸುವ ಪ್ರಯತ್ನವನ್ನು ರಾಜ್ಯದ ಕಾರ್ಮಿಕವರ್ಗ ಮತ್ತು ಜನತೆ ವಿಫಲಗೊಳಿಸುವುದಕ್ಕೆ ಮುಂದಾಗಬೇಕಾಗಿದೆ. ಎಡ ಪಕ್ಷಗಳೂ, ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳೂ ಒಂದಾಗಿ ಕಾಂಗ್ರೆಸ್ ಸರಕಾರದ ಸವಾಲನ್ನು, ಸರ್ವಾಧಿಕಾರ ಪ್ರವೃತ್ತಿಯನ್ನು ಎದುರಿಸಬೇಕಾಗಿದೆ. ●



ಬೆಂಗಳೂರಿನಲ್ಲಿ ಪೋಲೀಸ್ ದೌರ್ಜನ್ಯ ವಿರೋಧ ಮೆರವಣಿಗೆಯ ದೃಶ್ಯ

ಪೋಲೀಸ್ ದೌರ್ಜನ್ಯವನ್ನು ಪ್ರತಿಭಟಿಸಿ

ರಾಜ್ಯದಾದ್ಯಂತ ಧರಣಿ ಸತ್ಯಾಗ್ರಹ, ಮೆರವಣಿಗೆ

"ರಾಜ್ಯದ ನಿರಪರಾಧಿ ಹಾಗೂ ನಿರಾಯುಧ ಜನತೆಯ ಮೇಲೆ ಇಂದಿರಾ ಕಾಂಗ್ರೆಸ್ ಸರಕಾರವು ತನ್ನ ಪೋಲೀಸರಿಂದ ಗೋಲಿಬಾರ್ ಮಾಡಿಸಿ ನಡೆಸುತ್ತಿರುವ ನರಹತ್ಯೆಯನ್ನು ನಿಲ್ಲಿಸಬೇಕು" ಎಂಬ ಘೋಷಣೆ ರಾಜ್ಯದಾದ್ಯಂತ ಮೊಳಗಿತು. ರಾಜ್ಯದ ರಾಜಧಾನಿ ಬೆಂಗಳೂರು ನಗರ ಸೇರಿದಂತೆ ಜಿಲ್ಲಾ ಕೇಂದ್ರಗಳ ಉನ್ನತ ಪೋಲೀಸ್ ಅಧಿಕಾರಿಗಳ ಕಛೇರಿಗಳ ಮುಂದೆ ಹಾಗೂ ಹಲವಾರು ತಾಲ್ಲೂಕುಗಳಲ್ಲಿನ ಪೋಲೀಸ್ ಠಾಣೆಗಳೆದುರು ಮತ್ತು ಸ್ಥಳೀಯ ಪೋಲೀಸ್ ಠಾಣೆಗಳೆದುರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಸಾವಿರಾರು ಸದಸ್ಯರು, ಕಾರ್ಯಕರ್ತರು ಮತ್ತು ಹಿತೈಷಿಗಳು ಆಗಸ್ಟ್ 31ರಂದು ಧರಣಿ ಸತ್ಯಾಗ್ರಹ ಮಾಡಿ, ಪೋಲೀಸ್ ದೌರ್ಜನ್ಯ ನಿಲ್ಲಬೇಕೆಂದು ಆಗ್ರಹ ಪಡಿಸಿದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಕೊಟ್ಟ ಕರೆಯ ಮೇರೆಗೆ ಆಗಸ್ಟ್ 25 ರಿಂದ 31ರ ವರೆಗೆ "ಪೋಲೀಸ್ ದೌರ್ಜನ್ಯ ವಿರೋಧಿ" ಸಪ್ತಾಹವನ್ನು ಪಕ್ಷದ ಜಿಲ್ಲಾ ಸಮಿತಿಗಳು, ಮತ್ತು ಸ್ಥಳೀಯ ಸಮಿತಿಗಳು ಆಚರಿಸಿ, ಸಭೆ, ಮೆರವಣಿಗೆ, ಧರಣಿ ಸತ್ಯಾಗ್ರಹ, ಮನವಿ ಅರ್ಪಿಸುವುದು–ಇವೇ ಮೊದಲಾದ ಕಾರ್ಯಕ್ರಮಗಳನ್ನು ಆಚರಿಸಿವೆ.

ಬೆಂಗಳೂರು :

ಬೆಂಗಳೂರು ನಗರದ ಬೇರೆಬೇರೆ ಪ್ರದೇಶಗಳಲ್ಲಿ ಆಗಸ್ಟ್ 25ರಿಂದ 30ರ ತನಕ ಸಾರ್ವಜನಿಕ ಸಭೆಗಳನ್ನು ನಡೆಸಿ, ರಾಜ್ಯದ ಕಾಂಗ್ರೆಸ್ ಸರಕಾರವು ಅನುಸರಿಸುತ್ತಿರುವ ಪೋಲೀಸ್‌ರಾಜ್ ನೀತಿಯನ್ನು ಖಂಡಿಸಲಾಯಿತು. 31 ರಂದು ಮಧ್ಯಾಹ್ನ ಎರಡುಗಂಟೆಗೆ ರೈತ, ಕಾರ್ಮಿಕ, ವಿದ್ಯಾರ್ಥಿ ಯುವಜನರಿಂದ ಸೇರಿದ ಸುಮಾರು ಒಂದು ಸಾವಿರ ಜನರಿರುವ ಮೆರವಣಿಗೆಯು ನಗರದ ಸಿಲ್ವರ್ ಜುಬಿಲಿ ಪಾರ್ಕಿನಿಂದ ಹೊರಟು, ಶಿವಾಜಿನಗರದ ಮೂಲಕ ಪೋಲೀಸ್ ಕಮಿಷನರವರ ಕಛೇರಿಯನ್ನು ಮೂರುವರೆ ಗಂಟೆಗೆ ತಲುಪಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್, ರಾಜ್ಯಸಮಿತಿ ಸೆಕ್ರೆಟಾರಿಯೆಟ್ ಸದಸ್ಯರುಗಳಾದ ಕಾಂ. ವಿ.ಜೆ.ಕೆ. ನಾಯರ್, ಕಾಂ. ಎಸ್. ಸೂರ್ಯನಾರಾಯಣರಾವ್, ಮತ್ತು ಕಾಂ. ಪಿ. ರಾಮಚಂದ್ರರಾವ್, ಜಿಲ್ಲಾ ಸಮಿತಿ ಮುಖಂಡರುಗಳಾದ ಕಾಂ. ಟಿ ಎಸ್. ಅನಂತರಾಮ್, ಕಾಂ. ಪಿ. ಜಗನ್ನಾಥ ಕಾಂ. ಶ್ರೀನಿವಾಸ್ ಮೊದಲಾದವರ ನೇತೃತ್ವದಲ್ಲಿ ಬಂದ ಮೆರವಣಿಗೆಕಾರರು ಪೋಲೀಸ್ ಕಮಿಷನರವರ ಕಛೇರಿ ಎದುರು ರಸ್ತೆ ಮೇಲೆ ಕುಳಿತು ಧರಣಿ ಸತ್ಯಾಗ್ರಹ ನಡೆಸಿದರು ನಗರದ ಮಿನರ್ವ ಮಿಲ್ಲಿನಿಂದ ಹೊರಟ ಕಾರ್ಮಿಕರ ಮೆರವಣಿಗೆಯು ಸುಮಾರು ನಾಲ್ಕುವರೆ ಗಂಟೆಗೆ ಅಲ್ಲಿಗೆ ತಲುಪಿತು. ಹಲವಾರು ಕಾರ್ಮಿಕರು ಅಲ್ಲಿಗೇ ನೇರವಾಗಿ ಬಂದರು.

ಧರಣಿ ಕೂತಿದ್ದಂತೆಯೇ ಮಳೆ ಪ್ರಾರಂಭವಾಯಿತು. ಆದರೆ ಮಳೆರಾಯನಿಗೆ ಜಗ್ಗದೆ ಮೆರವಣಿಗೆಕಾರರೆಲ್ಲ ಘೋಷಣೆಗಳನ್ನು ಕೂಗುತ್ತಾ ಒಂದುವರೆ ತಾಸು ಅಲ್ಲೇ ಕುಳಿತರು. ಇದೊಂದು ಅಪೂರ್ವ ದೃಶ್ಯವಾಗಿತ್ತು. ಕಾಂ. ಎಂ. ಕೆ. ಭಟ್, ಕಾಂ ಸೂರ್ಯನಾರಾಯಣರಾವ್, ಮತ್ತು ಕಾಂ. ವಿ. ಜೆ ಕೆ. ನಾಯರ್ ಅವರುಗಳನ್ನೊಳಗೊಂಡ ನಿಯೋಗವು ಮಿನರ್ವ ಮಿಲ್ಲಿನಲ್ಲಿ ಪೋಲೀಸರ ಹಿಂಸೆಗೆ ಒಳಗಾಗಿದ್ದ ಕಾಂ. ಸೆಲ್ವರಾಜ್‌ರವರನ್ನೂ ಕೂಡಿಕೊಂಡು ಪೋಲೀಸ್ ಕಮಿಷನರವರನ್ನು ಭೇಟಿಮಾಡಿ, ಮನವಿಯನ್ನು ಕೊಡಲಾಯಿತು. ನಿರಪರಾಧಿಗಳ ಮೇಲಿನ ಪೋಲೀಸ್ ಹಿಂಸೆ ನಿಲ್ಲಬೇಕು, ಅರೆಸ್ಟ್‌ವಾರಂಟ್ ಇಲ್ಲದೆ ಜೈಲಿಗೆ ತೆಗೆದುಕೊಂಡು ಹೋಗಬಾರದು, ಕಾರ್ಮಿಕ-ಮಾಲಕ ವಿವಾದಗಳಲ್ಲಿ ಪೋಲೀಸರ ಹಸ್ತಕ್ಷೇಪ ನಿಲ್ಲಬೇಕು, ಜನತೆಯ ಮೇಲಿನ ಪೋಲೀಸ್ ದೌರ್ಜನ್ಯ ನಿಲ್ಲಬೇಕು–ಎಂಬ ಬೇಡಿಕೆಗಳು ಮನವಿಯಲ್ಲಿದ್ದುವು ಸುಮಾರು 5 ಗಂಟೆಗೆ, ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ ಸುಮಾರು ಒಂದುವರೆ ಸಹಸ್ರ ಜನರನ್ನೊಳಗೊಂಡ ಮೆರವಣಿಗೆಯು ಪೋಲೀಸ್ ಕಮಿಷನರವರ ಕಛೇರಿಯೆದುರಿಂದ ಹೊರಟು ಸಂಜೆ ಆರುವರೆಗೆ ಚಿಕ್ಕಲಾಲ್‌ಬಾಗನ್ನು ತಲುಪಿತು. ಚಿಕ್ಕ

[ಕಡೆಯ ಪುಟ ನೋಡಿ]

ಅಗತ್ಯಸೇವಾ ಮಸೂದೆ ವಿರುದ್ಧ ಹಾಸನ ಜಿಲ್ಲೆಯ ಕಾರ್ಮಿಕರ ಪ್ರತಿಭಟನೆ

ಕರ್ನಾಟಕ ರಾಜ್ಯದ ಕಾರ್ಮಿಕ ಸಂಘಗಳ ಸಂಯುಕ್ತ ಸಮಾವೇಶವು ಕೊಟ್ಟ ಕರೆಯಂತೆ ಸಿ. ಐ. ಟಿ. ಯು. ನೇತೃತ್ವದ "ಕರ್ನಾಟಕ ತೋಟ ಕಾರ್ಮಿಕರ ಸಂಘ"ದಡಿಯಲ್ಲಿ ಕಾರ್ಮಿಕರು ದಿ. 18-8-80ರಂದು ಹಾಸನ ಜಿಲ್ಲೆಯ ಸುಮಾರು 40 ತೋಟಗಳಲ್ಲಿಯೂ, ಹಾಸನ ನಗರದ ಹಾಸನ ಕಾಫಿ ಕ್ಯೂರಿಂಗ್ ವರ್ಕ್ಸ್, ರಾಜರತ್ನಂ, ಜಾನಕಿ ಮತ್ತು ತಿಲಕಂಮ್ಯಾಚ್‌ಫ್ಯಾಕ್ಟರಿಗಳಲ್ಲಿಯೂ ಅಗತ್ಯ ಸೇವಾ ಮಸೂದೆಯ ವಿರುದ್ಧ ಸಾರ್ವತ್ರಿಕ ಮುಷ್ಕರ ನಡೆಸಿದರು.

ಸಕಲೇಶಪುರ ತಾಲ್ಲೂಕಿನ ಹೊಸೂರು ಗ್ರಾಮದ ಸುತ್ತಲಿನ 4 ತೋಟಗಳ ಕಾರ್ಮಿಕರು ಮೆರವಣಿಗೆ ನಡೆಸಿ ಬಹಿರಂಗ ಸಭೆ ನಡೆಸಿದರು. ಸಂಘದ ಉಪ ಕಾರ್ಯದರ್ಶಿಗಳಾದ ಹೆಚ್. ಕೆ. ಅಮೀರ್ ಜಾನ್ ಮತ್ತು ಕಾಂ. ಪಾಲ್‌ರವರು ರಾಜ್ಯ ಸರಕಾರ ತರಲಿಚ್ಛಿಸಿರುವ ಅಗತ್ಯ ಸೇವಾ ಮಸೂದೆಯನ್ನೂ ಪೋಲೀಸರುಮಾಲೀಕರ ಪರ ಹಸ್ತಕ್ಷೇಪ ನಡೆಸಿ ಕಾರ್ಮಿಕರಿಗೆ ಕಿರುಕುಳ ಕೊಡುತ್ತಿರುವುದನ್ನೂ ಖಂಡಿಸಿ ಸಭೆಯಲ್ಲಿ ಮಾತನಾಡಿದರು.

ಬೇಲೂರು ತಾಲ್ಲೂಕಿನ ಅನೇಕ ತೋಟಗಳಲ್ಲಿನ ಕಾರ್ಮಿಕರು ಮೆರವಣಿಗೆಯಲ್ಲಿ ಸಂಡೇಕೆರೆಗೆ ಬಂದು ಅಗತ್ಯ ಸೇವಾ ಮಸೂದೆಯ ವಿರುದ್ಧ ಘೋಷಣೆಗಳನ್ನು ಕೂಗಿದರು.

ಬಸೂರು, ಮಟಸಾಗರ, ಕಾಫಿ ರೀಸರ್ಚ್, ಬಾಗೆ ಮೊದಲಾದ ತೋಟಗಳ ಕಾರ್ಮಿಕರು ಬಸೂರಿನಲ್ಲಿ ಸಭೆ ನಡೆಸಿದರು. ಕಾರ್ಯದರ್ಶಿ ವಿ. ಸುಕುಮಾರ್ ಸಭೆಯಲ್ಲಿ ಮಾತನಾಡಿದರು.

ಹಾಸನದ ಕಾಫಿ ಕ್ಯೂರಿಂಗ್ ವರ್ಕ್ಸ್‌ನ ಕಾರ್ಮಿಕರು ಮುಷ್ಕರ ನಡೆಸಿ ಕಾರ್ಖಾನೆ ಗೇಟಿನ ಮುಂಬಾಗ ಧರಣಿ ಕುಳಿತಿದ್ದರು. ಸಂಜೆ ನಡೆದ ಸಭೆಯಲ್ಲಿ ಕಾಂ. ವಿ. ಸುಕುಮಾರ್ ಅಗತ್ಯ ಸೇವಾ ಮಸೂದೆಯ ಅಪಾಯದ ಬಗ್ಗೆ ವಿವರಿಸಿದರು. ಮುಷ್ಕರಕ್ಕೆ ಮುಂಚಿತವಾಗಿ ಕರಾಳ ಮಸೂದೆಯ ಬಗ್ಗೆ ವಿವರಿಸಿ 5000 ಕನ್ನಡ, 2000 ತಮಿಳು ಕರಪತ್ರಗಳನ್ನು ಸಂಘದಿಂದ ಅಚ್ಚು ಹಾಕಿಸಿ ಹಂಚಲಾಗಿತ್ತು. ನಿರೀಕ್ಷೆಗಿಂತ ಹೆಚ್ಚಿನ ಕಡೆ ಮುಷ್ಕರ ನಡೆದು ಯಶಸ್ವಿಯಾಗಿದೆಯೆಂದು ತಡವಾಗಿ ಬಂದ ವರದಿ ತಿಳಿಸಿದೆ.

○

ವಳ್ಳೂರು ಗ್ರಾಮದಲ್ಲಿ ಯುವಜನ ಸಂಘಟನೆ

ದ. ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ವಳ್ಳೂರು ಗ್ರಾಮದಲ್ಲಿ 17-8-80ರಂದು ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಹೊಸ ಗ್ರಾಮ ಸಮಿತಿಯನ್ನು ಸಂಘಟಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ತಾಲ್ಲೂಕು ಡಿ. ವೈ. ಎಫ್. ಕಾರ್ಯದರ್ಶಿ ಶ್ರೀ ಮಹಾಬಲ ದೇವಾಡಿಗರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರಾಜ್ಯ ಮಲನಾಡು ಡಿ ವೈ. ಎಫ್. ಸಂಚಾಲಕ ಶ್ರೀ ಆನಂದ ಭಂಡಾರಿಯವರು ಭಾಗವಹಿಸಿದ್ದರು.

ಹೊಸ ಸಂಘಟನೆಯ ಅಧ್ಯಕ್ಷರಾಗಿ ಶ್ರೀ ಕರುಣಾಕರಶೆಟ್ಟಿ, ಉಪಾಧ್ಯಕ್ಷರಾಗಿ ಶ್ರೀ ಚೀಂಕ್ರ, ಕಾರ್ಯದರ್ಶಿಯಾಗಿ ಶ್ರೀ ಗೋವಿಂದ, ಜೊತೆಕಾರ್ಯದರ್ಶಿಯಾಗಿ ಶ್ರೀ ಸದ್ಯಪೂಜಾರಿ, ಸಮಿತಿ ಸದಸ್ಯರುಗಳಾಗಿ ಚಂದ್ರಶೇಖರ್ ಶೆಟ್ಟಿ, ನರಸಿಂಹ, ಶಿವ, ಮಂಜುಶೆಟ್ಟಿ ಮತ್ತು ಗೋಪಾಲ ಆಯ್ಕೆಯಾದರು.

●

ಕಲ್ಪತರು ಕಾಲೇಜು ಚುನಾವಣೆಯಲ್ಲಿ ಎಸ್ ಎಫ್ ಐ ಗೆ ಜಯ

ತಿಪಟೂರಿನ ಕಲ್ಪತರು ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಯು 22-8-80ರಂದು ನಡೆಯಿತು. ಇದರಲ್ಲಿ ಉಪಾಧ್ಯಕ್ಷರಾಗಿ ಉದಯ ಕುಮಾರ್, ಕಾರ್ಯದರ್ಶಿಯಾಗಿ ಎನ್. ರಾಜಣ್ಣ ಮತ್ತು ಎಸ್. ಎಫ್. ಐ ನ 25 ಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ.

ಎನ್.ಎಸ್.ಯು.ಐ . ಎ ಬಿ.ವಿ.ಪಿ. ವಿದ್ಯಾರ್ಥಿ ಸಂಘಗಳು ನಡೆಸಿದ ಗೂಂಡಾಗಿರಿ, ಆಡಳಿತವರ್ಗದ ದೌರ್ಜನ್ಯ ಇವೆಲ್ಲವನ್ನೂ ವಿರೋಧಿಸಿ ಎಸ್.ಎಫ್. ಐ. ಜಯ ಪಡೆದಿದೆ. ವಿದ್ಯಾರ್ಥಿ ಸಂಘದ ಫಲಿತಾಂಶ ಪ್ರಕಟವಾದೊಡನೆ ಭಾರಿ ಮೆರವಣಿಗೆ ನಡೆಯಿತು. ಇದರ ನಾಯಕತ್ವವನ್ನು ಸ್ಥಳೀಯ ಎಸ್. ಎಫ್.ಐ ಕಾರ್ಯದರ್ಶಿ ಕಾಂ. ಜಯಶಂಕರ್, ಉಪಾಧ್ಯಕ್ಷ ಕಾಂ. ಮಲ್ಲಿಕಾರ್ಜುನ ಮತ್ತು ವಿದ್ಯಾರ್ಥಿ ಪ್ರತಿನಿಧಿಗಳು ವಹಿಸಿದ್ದರು. ನಂತರ ಬಹಿರಂಗ ಸಭೆ ನಡೆಯಿತು ರೈತ-ವಿದ್ಯಾರ್ಥಿಗಳ ಐಕ್ಯತೆ ಕುರಿತು ರಾಜ್ಯ ರೈತಸಂಘದ ಕಾಂ.ಪಿ.ಜಗನ್ನಾಥ್, ಕಾಂ.ಆರ್.ಎಸ್. ಚನ್ನಬಸವಣ್ಣ, ಕಾಂ. ದಯಾನಂದ ಮುಂತಾದವರು ಮಾತನಾಡಿದರು.

○

ನಿಧನ

ಬೆಳಗಾಮಿನ ಸಿ. ಐ ಟಿ ಯು ನ ಸಕ್ರಿಯ ಸದಸ್ಯರಾಗಿದ್ದ ಶ್ರೀ ಬಿ. ಡಿ. ಪತ್ತರ್ ಅವರು 26-8-80ರಂದು ಹೃದಯಾಘಾತದಿಂದ ನಿಧನರಾದರು. ಅವರಿಗೆ ಕೇವಲ 38 ವರ್ಷವಾಗಿತ್ತು. ಮಾರ್ಕ್ಸ್‌ವಾದಿ ಪಕ್ಷದ ಬೆಳಗಾಂ ಕಾರ್ಯಕರ್ತರು ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಬೆಳ್ತಂಗಡಿ ತಾಲೂಕು ದಲಿತ ಸಂಘರ್ಷ ಸಮಿತಿಯ ಉದ್ಘಾಟನೆ

ದ.ಕ. ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಸಂಚಾಲಕರಾದ ಬಿ. ರಾಮಕೃಷ್ಣನವರ ಅಧ್ಯಕ್ಷತೆಯಲ್ಲಿ ಬೆಳ್ತಂಗಡಿ ತಾಲ್ಲೂಕು ದಲಿತ ಸಂಘರ್ಷ ಸಮಿತಿ ಶಾಖೆಯು ತಾ॥ 31-8-80ರಂದು ಆರಂಭವಾಯಿತು. ಆರಂಭದಲ್ಲಿ ಕಾಂ, ಡೀಕಯ್ಯನವರು ಸ್ವಾಗತ ಬಯಸಿದರು. ಉದ್ಘಾಟನಾ ಭಾಷಣ ಮಾಡುತ್ತಾ ರಾಮಕೃಷ್ಣನವರು ವರ್ಗ ವ್ಯವಸ್ಥೆ ಸೃಷ್ಟಿಸಿದ ಜಾತಿ ಮತ್ತು ವರ್ಣ ವ್ಯವಸ್ಥೆಯನ್ನು ಕಿತ್ತೆಸೆಯಲು ಮುಂದಾಗಲು ಕರೆಯಿತ್ತರು. ಭಾರತಕ್ಕೆ ಸ್ವಾತಂತ್ರ್ಯ ದೊರೆತು 34 ವರ್ಷಗಳಾದರೂ, ಪ್ರಜಾಪ್ರಭುತ್ವ ದೊರೆತರೂ ದಲಿತರ ಜೀವನ ಸ್ಥಿತಿ ಮಾತ್ರ ಇನ್ನೂ ಬದಲಾಗಲಿಲ್ಲ. ದಲಿತರ ಉದ್ಧಾರ ಕಲ್ಯಾಣಗಳ ಭಾಷಣ ಮಾತ್ರ ದುಷ್ಟ ರಾಜಕಾರಣಿಗಳ ಬಾಯಿಯಿಂದ ಅನವರತವೂ ಕೇಳಿ ಬರುತ್ತಿದೆ. ದಲಿತರು ಅವರ ಪೊಳ್ಳು ಆಶ್ವಾಸನೆಗಳಿಗೆ ಬಲಿಯಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿದ್ದಾರೆ. ಉದ್ಧಾರದ ಭಾಷಣ ಮಾಡುವ ರಾಜಕಾರಣಿಗಳ ಗೂಂಡಾಗಳ ದೌರ್ಜನ್ಯಕ್ಕೆ ತುತ್ತಾಗುತ್ತಿದ್ದಾರೆ. ಜೀವನವೂ ಕೂಲಿ, ಉಳುಮೆಗೆ ಭೂಮಿ ಸಿಗುವಲ್ಲಿ ವಂಚನೆಗೊಳಗಾದಿದ್ದಾರೆ. ತಮ್ಮ ನ್ಯಾಯಯುತ ಹಕ್ಕು ಬಾಧ್ಯತೆಗಳನ್ನು ಗಳಿಸಿಕೊಳ್ಳಲು ಹೋರಾಟವೊಂದೇ ದಾರಿ. ಶೋಷಿತ ವರ್ಗದವರಲ್ಲಿ ವರ್ಗ ಜಾಗೃತಿ ಉಂಟಾಗದ ಹೊರತು ವಿಮೋಚನೆಹೊಂದಲು ಸಾಧ್ಯವಿಲ್ಲ. ಅದಕ್ಕಾಗಿ ದಲಿತರು ಜಾತಿ ಉಪಜಾತಿಗಳ ಕಗ್ಗಂಟನ್ನು ಕಡಿದೊಗೆಯಲು ನಾವೆಲ್ಲರೂ ಶ್ರಮಜೀವಿಗಳೆಂಬ ವರ್ಗ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಈ ಉದ್ದೇಶವನ್ನಿಟ್ಟುಕೊಂಡು ಸ್ಥಾಪಿತವಾಗಿರುವ ದಲಿತ ಸಂಘರ್ಷ ಸಮಿತಿಯು ದಲಿತರ ಮೇಲಾಗುವ ಅನ್ಯಾಯ ಶೋಷಣೆಗಳ ವಿರುದ್ಧ ಹೋರಾಟ ನಡೆಸಿರುತ್ತದೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ ಆರಂಭವಾಗಿರುವ ಸಂಘಟನೆಯು ದಲಿತರನ್ನು ಕ್ರಿಯಾಶೀಲರನ್ನಾಗಿ ಮಾಡುವಲ್ಲಿ ಯಶಸ್ವಿಯಾಗಲೆಂದು ಹಾರೈಸಿದರು. ಮಾತ್ರವಲ್ಲದೆ ಶ್ರೀ ಬಸವಲಿಂಗಪ್ಪನವರು ಸಲಹೆ ಮಾಡಿರುವ ಆರ್ಥಿಕ ತುರ್ತು ಪರಿಸ್ಥಿತಿಯ ಜಾರಿಯ ಧೋರಣೆಯನ್ನು ಖಂಡಿಸಿದರು.

ಬಳಿಕ ಕಾಂ. ಎಂ. ಸೋಮಶೇಖರನವರು ಮಾತನಾಡಿ ವ್ಯವಸ್ಥೆಯನ್ನು ಕಿತ್ತೆಸೆಯಲು ದಲಿತರು ಐಕ್ಯ ಹೋರಾಟ ಮಾಡಲು ಕರೆಯಿತ್ತರು.

ಈ ಕೆಳಗಿನವರು ತಾಲ್ಲೂಕು ಸಮಿತಿಯ ಪದಾಧಿಕಾರಿಗಳನ್ನಾಗಿ ಆಯ್ಕೆ ಮಾಡಲಾಯಿತು.

ಸಂಚಾಲಕ ಕಾಂ. ಡೀಕಯ್ಯ ಮತ್ತು ಸಮಿತಿಯ ಸದಸ್ಯರು ಕುಮಾರ್ ಬಿ, ಎಂ. ಸೋಮಶೇಖರ, ವಿಶ್ವನಾಥ. ಜಿ, ಪೆರ್ನು, ಮೊಯಿಲ ಪಿ. ಮತ್ತು ಬಿ. ಸುಶೀಲ ಇವರುಗಳಿರುವ ಸಮಿತಿಯನ್ನು ರಚಿಸಲಾಯಿತು.

●

ಒಳಮೊಗ್ರು ಗ್ರಾಮದ ರೈತಸಂಘದ ಸಭೆ

ದ. ಕ. ಜಿಲ್ಲಾ ಪುತ್ತೂರು ತಾಲ್ಲೂಕು ಒಳಮೊಗ್ರು ಗ್ರಾಮದ ರೈತ ಕೃಷಿಕಾರ್ಮಿಕರ ಸಭೆಯೊಂದು ತಾ. 28-8-80ರಂದು ಜರಗಿತು. ಸಭೆಯ ಅಧ್ಯಕ್ಷತೆಯನ್ನು ದಲಿತ ಕಾರ್ಮಿಕ ಮುಖಂಡರೂ, ಪುತ್ತೂರು ತಾಲ್ಲೂಕು ರೈತಸಂಘದ ಉಪಾಧ್ಯಕ್ಷರೂ ಆದ ಕಾಂ. ಬಿ. ರಾಮಕೃಷ್ಣನವರು ವಹಿಸಿದರು. ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ, ಲಕ್ಷ್ಮಣಗೌಡರು ಮುಖ್ಯ ಅತಿಥಿಗಳಾಗಿದ್ದರು. ಆರಂಭದಲ್ಲಿ ವಿದ್ಯಾರ್ಥಿ ಮುಖಂಡರಾದ ಕಾಂ. ಈಶ್ವರನಾಯ್ಕ ಅವರು ಸ್ವಾಗತ ಬಯಸಿದರು.

ಸಭೆಯನ್ನುದ್ದೇಶಿಸಿ ಕಾಂ. ಲಕ್ಷ್ಮಣ ಗೌಡರು ಮಾತನಾಡಿ ರಾಜ್ಯದಲ್ಲಿ ನಡೆಯುತ್ತಿರುವ ರೈತರ ಚಳುವಳಿಯನ್ನು ವಿವರಿಸಿದರು. ಸಂಕಾರವು ರೈತರ ಮೇಲೆ ನಡೆಸಿದ ದಬ್ಬಾಳಿಕೆಯನ್ನು ಖಂಡಿಸಿದರು. ರೈತರಿಗೆ ನ್ಯಾಯ ಸಿಗಬೇಕಾದರೆ ಸಂಘಟಿತ ಹೋರಾಟವೊಂದೇ ದಾರಿ ಎಂದರು. ಬಳಿಕ ಕಾಂ. ಬಿ. ರಾಮಕೃಷ್ಣನವರು ದೇಶದ ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು. ಬೆಳೆಬೆಳೆಸಿದ ರೈತನಿಗೆ ಯೋಗ್ಯ ಬೆಲೆ ಸಿಗದೆ ಕಷ್ಟದಲ್ಲಿ ತೊಳಲಾಡುತ್ತಿದ್ದಾನೆ. ಶ್ರಮಿಕವರ್ಗಕ್ಕೆ ಜೀವನಾವಶ್ಯಕ ವೇತನವೂ ಇಲ್ಲದೆ ತ್ರಿಶಂಕು ಸ್ವರ್ಗ ಜೀವನ ನಡೆಸುತ್ತಿದ್ದಾರೆ. ಆದರೆ ಇವರಿಬ್ಬರ ವೈಥೆ ಕಾಳಸಂತೆಕೋರರು, ಭೂಮಾಲಕ ಬಂಡವಾಳಶಾಹಿಗಳು ಮಾತ್ರ ಅಗರ್ಭ ಶ್ರೀಮಂತರಾಗುತ್ತಿದ್ದಾರೆ ಎಂದ ರಾಮಕೃಷ್ಣನವರು, ರೈತ ಕೃಷಿಕಾರ್ಮಿಕ

ಇಲವಾಲದಲ್ಲಿ ನ್ಯಾಯಕ್ಕಾಗಿ ಹೋರಾಡಲು ಸಿದ್ಧತೆ

ತಾ. 1-9-80ರಂದು ಮೈಸೂರು ತಾಲ್ಲೂಕು ಇಲವಾಲ ಗ್ರಾಮದಲ್ಲಿ ಮಹೇಂದ್ರ ಮತ್ತು ಮಹೇಂದ್ರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರ ಸಭೆ ಶ್ರೀ ಎಂ. ಜಿ. ಮಹದೇವಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀಗಳಾದ ಎಂ. ಎನ್. ಉಗ್ರಪ್ಪ ಕೆ. ತಿಮ್ಮೇಗೌಡ, ಮತ್ತು ಎನ್. ಪುಟ್ಟಸ್ವಾಮಿಯವರು ಉಪಸ್ಥಿತರಿದ್ದು ಸಭೆಯಲ್ಲಿ ಮಾರ್ಗದರ್ಶನ ನೀಡಿದರು.

ತಾ. 24-5-80ರಂದು ಬೆಳವಾಡಿ ಕೈಗಾರಿಕಾ ಕ್ಷೇತ್ರದಲ್ಲಿ ಮಹೇಂದ್ರ ಮತ್ತು ಮಹೇಂದ್ರ ಕಂಪನಿಯವರು ನಿರ್ಮಾಣ ಮಾಡುತ್ತಿದ್ದ ಕಾರ್ಖಾನೆಯ ಕಟ್ಟಡ ಕುಸಿದು ಬಿದ್ದ ಪರಿಣಾಮವಾಗಿ ಸುಮಾರು 6 ಮಂದಿ ಸತ್ತು 43 ಮಂದಿಗೆ ತೀವ್ರ ಗಾಯಗಳಾದುವು. ಸತ್ತವರ ಮತ್ತು ಗಾಯಗೊಂಡವರ ಪರಿಹಾರಕ್ಕೆ ಕಂಪನಿಯವರು ಮತ್ತು ಸರ್ಕಾರವು ತಾತ್ಕಾಲಿಕವಾಗಿ ಕೆಲವು ಪರಿಹಾರ ಕ್ರಮ ಮಾಡಿ ನಂತರ ಅಸಡ್ಡೆಯ ಮನೋಭಾವವನ್ನು ತಾಳಿ ಸಂಕಷ್ಟದಲ್ಲಿರುವವರಿಗೆ ಯಾವ ರೀತಿಯ ಪರಿಹಾರ ಸೌಲಭ್ಯಗಳನ್ನು ಕೊಡದೆ ಇದ್ದಾರೆ.

ಮೈಸೂರು ಜಿಲ್ಲಾಧಿಕಾರಿಗಳಿಗೆ ಮನವಿಗಳನ್ನು ಸಲ್ಲಿಸಿ ಕಾಗದಗಳನ್ನು ಬರೆದರೂ ಇದುವರೆವಿಗೂ ಘಟನೆ ಸಂಭವಿಸಿದಾಗ ಮಾಡಿದ ವಾಗ್ದಾನವನ್ನು ಪೂರೈಸಲು ಅವರು ಹಿಂಜರಿಯುತ್ತಿದ್ದಾರೆ. ಇದನ್ನು ಪ್ರತಿಭಟಿಸಿ ನೊಂದವರಿಗೆ ಪರಿಹಾರ, ಉದ್ಯೋಗ ಮತ್ತಿತರ ಸೌಲಭ್ಯವನ್ನು ದೊರಕಿಸುವಂತೆ ಮಾಡಲು ಶ್ರೀಗಳಾದ ರಾಮೇಗೌಡ, ಅಣ್ಣಯ್ಯಾಚಾರಿ, ಕೆಂಪಲಿಂಗಯ್ಯ, ನಿಂಗಾಚಾರಿ, ಸಿದ್ದೇಗೌಡ, ನಂಜಪ್ಪ, ಈರಾಚಾರ್, ಮತ್ತು ಮಾದಯ್ಯನವರನ್ನುಳ್ಳ ಒಂದು ಕ್ರಿಯಾಸಮಿತಿಯನ್ನು ರಚಿಸಿ ಶ್ರೀ ರಾಮೇಗೌಡರು ಸಂಚಾಲಕರಾಗಿರುತ್ತಾರೆ.

ಈ ಸಮಿತಿಯವರು ಈ ಸಮಸ್ಯೆಗಳ ಬಗ್ಗೆ ಹಸ್ತ ಪತ್ರಿಕೆಗಳನ್ನು ಹಾಕಿ, ಗ್ರಾಮಾಂತರಗಳಲ್ಲಿ ಪಾದಯಾತ್ರೆ ನಡೆಸಿ ಪ್ರಚಾರ ಕೈಗೊಂಡು ಅಧಿಕ ಸಂಖ್ಯೆಯಲ್ಲಿ ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿ ಮನವಿ ಸಲ್ಲಿಸಿ ಸಮಸ್ಯೆಗಳನ್ನು ಬಗೆಹರಿಸಲು ಚಳುವಳಿ ನಡೆಸಬೇಕೆಂದು ತೀರ್ಮಾನಿಸಿದ್ದಾರೆ.

ಸಂಘವನ್ನು ಬಲಿಷ್ಟವಾಗಿ ಕಟ್ಟಿ ಹೋರಾಟದ ಮೂಲಕ ಅಸಮಾನತೆಯ ಸಮಾಜವನ್ನು ಕಿತ್ತೆಸೆದು ಸಮಾನತೆಯ ಹೊಸ ಸಮಾಜವೊಂದರ ಸೃಷ್ಟಿಗಾಗಿ ಶ್ರಮಿಸಲು ಕರೆಯಿತ್ತರು.

ತಾ. 15-9-80 ರಂದು ನಡೆಯಲಿರುವ ಬೃಹತ್ ಪ್ರತಿಭಟನಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ನಿರ್ಣಯಿಸಿದ ಬಳಿಕ, ಕಾಂ. ಚನಿಯನಾಯ್ಕನವರು ವಂದನಾರ್ಪಣೆ ಮಾಡುವುದರೊಂದಿಗೆ ಸಭೆ ಮುಕ್ತಾಯವಾಯಿತು.

●

'ಕರ್ನಾಟಕದಲ್ಲಿ ಜರುಗುತ್ತಿರುವ ಜನಪರ ಚಳುವಳಿ ಆರೋಗ್ಯಕರ'

ದೇಶದ ಈಶಾನ್ಯ ಭಾಗವಾದ ಅಸ್ಸಾಂನಲ್ಲಿ ಪ್ರತ್ಯೇಕತಾವಾದ ಚಳುವಳಿ, ಉತ್ತರ ಪ್ರದೇಶದಲ್ಲಿ ಜಾತೀಯ, ಮತೀಯ ಗಲಭೆಗಳಾಗುತ್ತಿರುವ ಇಂದಿನ ಸಂದರ್ಭದಲ್ಲಿ ಕರ್ನಾಟಕದಲ್ಲಿ ನಡೆಯುತ್ತಿರುವ ರೈತರ ಚಳುವಳಿ, ಕಾರ್ಮಿಕ ಚಳುವಳಿಯು ಭಿನ್ನವಾದ ಸ್ವರೂಪದ್ದಾಗಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಆಗಸ್ಟ್ 31ರಂದು ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಎಂ. ಕೆ. ಭಟ್ ಅವರು, ಉತ್ತಮ ಜೀವನಕ್ಕಾಗಿ ರಾಜ್ಯದ ರೈತರು ಮತ್ತು ಕಾರ್ಮಿಕರು ನಡೆಸುತ್ತಿರುವ ಚಳುವಳಿಗಳು ಆರೋಗ್ಯಕರವೆಂದು ಹೇಳಿ, ಈ ಚಳುವಳಿಗೆ ತಮ್ಮ ಪಕ್ಷದ ಸಂಪೂರ್ಣ ಬೆಂಬಲವಿದೆಯೆಂದು ಘೋಷಿಸಿದರು.

'ಪೋಲೀಸ್ ದೌರ್ಜನ್ಯ ವಿರೋಧಿ ಸಪ್ತಾಹ'ದ ಅಂಗವಾಗಿ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯು ವ್ಯವಸ್ಥೆ ಮಾಡಿದ್ದ ಸಾರ್ವಜನಿಕ ಸಭೆಯ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಸಿ. ಪಿ. ಐ. (ಎಂ) ಕಾರ್ಯದರ್ಶಿಯವರು, ಕೇಂದ್ರ ಸರ್ಕಾರ ನೇಮಿಸಿದ್ದ ಪೋಲೀಸ್ ಆಯೋಗದ ವರದಿಯನ್ನು ಸಾರ್ವಜನಿಕರ ಮುಂದೆ ಆಗಾಗ ಓದಿ ಹೇಳಿದರು. ವರದಿಯನ್ನು ನೀಡಿರುವ ನಿವೃತ್ತ ನ್ಯಾಯಾಧೀಶರೊಬ್ಬರೇ ಹೇಳಿರುವಂತೆ "ಜನರಿಗೆ ಹಿಂಸೆ ಕೊಡುವುದರಲ್ಲಿ ಪೋಲೀಸ್ ಘಟಕವನ್ನು ಮೀರಿಸುವವರು ಮತ್ತಾರು ಇಲ್ಲ" ಎಂಬ ಅಂಶವನ್ನು ಸಿ ಪಿ ಐ.(ಎಂ) ನಾಯಕರು ಸಾರ್ವಜನಿಕರ ಅವಗಾಹನೆಗೆ ತಂದರು.

ರಾಜ್ಯದ ಸಮಸ್ತ ಜನತೆಯ ರಕ್ಷಕರಾಗಬೇಕಿದ್ದ ಪೋಲೀಸ್ ಇಲಾಖೆಯು ಕೇವಲ ಶ್ರೀಮಂತರ ರಕ್ಷಣೆಯಲ್ಲಿ ಮಾತ್ರ ತೊಡಗಿರುವುದನ್ನು ಅತ್ಯುಗ್ರವಾಗಿ ಆಕ್ಷೇಪಿಸಿದ ಮಾರ್ಕ್ಸಿಸ್ಟ್ ಕಾರ್ಯದರ್ಶಿಯವರು ಚಳುವಳಿ ನಡೆಸುವ ಜನರ ಮೇಲೆ ಪೋಲೀಸರು ಲಾಠಿ ಚಾರ್ಜು, ಗೋಲೀಬಾರ್ ಮಾಡುವುದನ್ನು ಮತ್ತು ಕಾರ್ಮಿಕ ವಿವಾದಗಳಲ್ಲಿ ಪೋಲೀಸ್ ಮಧ್ಯಪ್ರವೇಶಿಕೆಯನ್ನು ಖಂಡಿಸಿದರು.

ರಾಷ್ಟ್ರದ ರಾಜಕೀಯ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸಿದ ಎಂ. ಕೆ. ಭಟ್ ಅವರು, "ಬೆಲೆಗಳನ್ನು ಏರಿಸಿದ್ದು, ಕಾನೂನು ವ್ಯವಸ್ಥೆಯನ್ನು ಅಧ್ವಾನಗೊಳಿಸಿದ್ದು ಜನತಾ ಸರ್ಕಾರ" ನಾವು ಬೆಲೆ ಇಳಿಸುತ್ತೇವೆ, ಕಾನೂನು ಪಾಲಿಸುತ್ತೇವೆ' ಎಂಬ ಭರವಸೆಯ ಮೇಲೆ ಮತ್ತೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಇಂದಿರಾಕಾಂಗ್ರೆಸ್ ಪಕ್ಷದ ಸರ್ಕಾರ ಮಾಡಿರುವುದೇನು ಎಂದು ಪ್ರಶ್ನಿಸಿದರು. ವಿರೋಧ ಪಕ್ಷಗಳ ಆಳ್ವಿಕೆ ಇರುವ ಪ. ಬಂಗಾಳ, ಕೇರಳ, ತ್ರಿಪುರ, ತಮಿಳುನಾಡು ಮತ್ತು ಕಾಶ್ಮೀರ ರಾಜ್ಯಗಳನ್ನು ಬಿಟ್ಟು ಉಳಿದೆಲ್ಲ ರಾಜ್ಯಗಳಲ್ಲಿ ಕಾನೂನು ವ್ಯವಸ್ಥೆ ಕುಸಿದಿರುವುದು, ಉ. ಪ್ರದೇಶದಲ್ಲಿ ಮತೀಯ ಗಲಭೆಗಳಾಗುತ್ತಿರುವುದು, ಅಸ್ಸಾಂನಲ್ಲಿ ಭಿವ್ರಕಾರಿ ಚಳುವಳಿ ನಡೆಯುತ್ತಿರುವುದು, ಮಹಿಳೆಯರ ಮೇಲೆ ಅತ್ಯಾಚಾರಗಳಾಗುತ್ತಿರುವುದು, ಹರಿಜನರ ಮೇಲೆ ಹಲ್ಲೆಗಳಾಗುತ್ತಿರುವುದನ್ನು ಹಾಗೂ ಬೆಲೆಗಳು ರಾಷ್ಟ್ರದ ಎಲ್ಲಾ ಕಡೆ ಏರುತ್ತಿರುವ ಸುದ್ದಿಗಳನ್ನು ಜನತೆಯು ದಿನನಿತ್ಯ ಪತ್ರಿಕೆಯಲ್ಲಿ ಓದುತ್ತಿದ್ದಾರೆ ಎಂದು ಕಾಂ. ಭಟ್ ನುಡಿದರು. ಬೆಲೆಏರಿಕೆಯಿಂದ ಜನ ಪರಿತಪಿಸುತ್ತಿರುವ ಸಂದರ್ಭದಲ್ಲಿ ಪ್ರಧಾನಿ ಇಂದಿರಾಗಾಂಧಿಯವರಿಗೆ ತಮ್ಮ ಮತ್ತೊಬ್ಬ ಮಗನನ್ನು ನಾಯಕನನ್ನಾಗಿ ಮಾಡುವ ಕಾತುರವಿರುವುದನ್ನೂ ಕಾಂ. ಭಟ್ ಹಾಸ್ಯಮಾಡಿದರು.

ತಮ್ಮ ಪಕ್ಷದ ಹೋರಾಟವು ಪೋಲೀಸರ ಮೇಲಲ್ಲ ಎಂದು ಸ್ಪಷ್ಟವಾಗಿ ಹೇಳಿದ ಸಿ. ಪಿ. ಎಂ. ನಾಯಕರು, ಜನ ಹೋರಾಟಗಳನ್ನು ದಮನ ಮಾಡಲು ಕಾಂಗ್ರೆ ಸರ್ಕಾರವು ಪೋಲೀಸರನ್ನು ಬಳಸಿಕೊಳ್ಳುತ್ತಿರುವ ಕಾಂಗ್ರೆ ಸರ್ಕಾರದ ಪೋಲೀಸ್ ನೀತಿಯ ವಿರುದ್ಧ ನಾವು ಪ್ರತಿಭಟಿಸುತ್ತಿದ್ದೇವೆ- ಹೋರಾಡುತ್ತಿದ್ದೇವೆ ಎಂದರು. ಸಿ. ಪಿ. ಐ. (ಎಂ) ನೇತೃತ್ವದ ಪ. ಬಂಗಾಳ, ಕೇರಳ ಮತ್ತು ತ್ರಿಪುರ ರಾಜ್ಯಗಳಲ್ಲಿ ಪೋಲೀಸರಿಗೂ ಸಂಘಟನಾ ಹಕ್ಕನ್ನು ಕೊಟ್ಟ ಏಕೈಕ ಸರ್ಕಾರವು ತಮ್ಮದೆಂದು ಹೆಮ್ಮೆಯಿಂದ ಹೇಳಿದ ಭಟ್ ಅವರು, ಕಾಂಗ್ರೆ ಸರ್ಕಾರದ ಪೋಲೀಸ್ ದೌರ್ಜನ್ಯದ ವಿರುದ್ಧ ರಾಜ್ಯದಲ್ಲಿ ಹೋರಾಡುತ್ತಿರುವ ಪ್ರಥಮ ರಾಜಕೀಯ ಪಕ್ಷವೂ ತಮ್ಮದಾಗಿದೆ ಎಂದು ಅಭಿಮಾನದಿಂದ ಹೇಳಿದರು.

ಕಾನೂನು ಜಾರಿಗಾಗಿ ಸರ್ಕಾರಿ ಕಚೇರಿಗಳು, ಅಧಿಕಾರಿಗಳು, ಕೋರ್ಟುಗಳನ್ನು ಕಾಯುದ್ದುಕುಳಿತರೆ ಪ್ರಯೋಜನವಿಲ್ಲವೆಂಬುದು ಜನತೆಯ ಅನುಭವವಾಗಿದೆ ಎಂದ ಎಂ. ಕೆ. ಅವರು; ಉತ್ತಮ ಬದುಕಿಗಾಗಿ ದುಡಿಯುವ ಜನರು ಹೋರಾಟದ-ಚಳುವಳಿಯ ಮಾರ್ಗಗಳನ್ನು ಹಿಡಿಯಬೇಕೆಂದು ಕರೆ ನೀಡಿದರು.

ಬೆಲೆಏರಿಕೆ, ನಿರುದ್ಯೋಗ, ರೈತರ ಕಷ್ಟಗಳ ಪರಿಹಾರಕ್ಕಾಗಿ ರಾಷ್ಟ್ರಮಟ್ಟದಲ್ಲಿ ಹೋರಾಡಲು ಸಿ. ಪಿ. ಎಂ. ನಾಯಕತ್ವದಲ್ಲಿ ಎಲ್ಲಾ ಎಡಪಕ್ಷಗಳು ಮತ್ತು ಲೋಕದಳ ಹಾಗೂ ಅರಸು ಕಾಂಗ್ರೆಸ್ ಪಕ್ಷಗಳು ಸಂಯುಕ್ತ ಚಳುವಳಿಯನ್ನು ಆರಂಭಿಸುವ ಸುದ್ದಿಯನ್ನು ಸಭೆಯಲ್ಲಿ ಪ್ರಸ್ತಾಪಿಸಿದ ರಾಜ್ಯಸಮಿತಿಯ ಕಾರ್ಯದರ್ಶಿಗಳು, ರಾಜ್ಯದಲ್ಲೂ ಸಿ ಪಿ ಐ, ಅರಸು ಕಾಂಗ್ರೆಸ್ ಹಾಗೂ ಜನತಾಪಕ್ಷಗಳು ತಮ್ಮೊಂದಿಗೆ ಸೇರಿ ಸಂಯುಕ್ತ ಕಾರ್ಯಕ್ರಮ ರೂಪಿಸುವಲ್ಲಿ ನೆರವಾಗಬೇಕೆಂದು ಮನವಿಮಾಡಿದರು.

ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ. ವಿ. ಜೆ. ಕೆ. ನಾಯರ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ಕಾನೂನಿನ ಚೌಕಟ್ಟು ಮೀರಿ ಕಾರ್ಮಿಕ ಚಳುವಳಿಯನ್ನು ಉದ್ದೇಶಪೂರ್ವಕವಾಗಿ ಮುರಿಯುವ ಪೋಲೀಸರ ವಿರುದ್ಧವೂ ಕಾರ್ಮಿಕವರ್ಗ ಆತ್ಮರಕ್ಷಣೆಯ ಮಾರ್ಗ ಹುಡುಕಿಕೊಳ್ಳಬೇಕಾಗುತ್ತದೆ ಎಂದು ಪೋಲೀಸ್ ಇಲಾಖೆಗೆ ಎಚ್ಚರಿಕೆ ನೀಡಿದರು. ಪೋಲೀಸ್ ಇಲಾಖೆಯಲ್ಲಿನ ವಿಪರೀತ ಭ್ರಷ್ಟಾಚಾರವನ್ನು ಖಂಡಿಸಿದ ಕಾಂ. ವಿ ಜೆ. ಕೆ. ಪೋಲೀಸರು ಉತ್ತಮ ಜೀವನಕ್ಕೆ ಹೆಚ್ಚು ವೇತನ ಕೇಳಲಿ- ನಾವು ಬೆಂಬಲಿಸುತ್ತೇವೆ ಎಂದರು.

ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರ ರಾಯರು ಮಾತನಾಡಿ ರೈತರ ಮೇಲಿನ ಪೋಲೀಸ್ ದೌರ್ಜನ್ಯವನ್ನು ಖಂಡಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸಿ. ಐ. ಟಿ. ಯು. ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣ ರಾವ್ ಅವರು ಮಾತನಾಡಿ ಪೋಲೀಸ್ ಇಲಾಖೆಯವರು ಸೆಕ್ಷನ್ 35 ಅನ್ನು ಪದೇಪದೇ ಬಳಸಿ ಕಾರ್ಮಿಕ ಚಳುವಳಿಯನ್ನು ಮುರಿಯುವ ನೀತಿ ಖಂಡಿಸಿದರು. ಕಾಂಗ್ರೆಸ್ಸಿಗರು, ಜನತಾದವರು ಐದು ವರ್ಷಗಳಿಗೊಂದಾವರ್ತಿ ಚುನಾವಣೆಯ ಸಮಯದಲ್ಲಿ ಮಾತ್ರ ಜನತೆಯ ಬಳಿ ಬರುವ ಪಕ್ಷಗಳಾಗಿವೆ ಎಂದು ಹೇಳಿ, ಜನರ ದಿನನಿತ್ಯದ ಹೋರಾಟಗಳಲ್ಲಿ, ಅವರ ಎಲ್ಲಾ ಸಮಸ್ಯೆಗಳಲ್ಲಿ ಅವರೊಂದಿಗೆ ಹೋರಾಡುತ್ತಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ರಾಜ್ಯದಲ್ಲಿ ಪ್ರಬಲವಾಗಿ ಕಟ್ಟಲು ಕಾರ್ಮಿಕರು ನೆರವಾಗಬೇಕು ಎಂದು ಮನವಿಮಾಡಿದರು.

ಜಿಲ್ಲಾ ಸಮಿತಿಯ ಸದಸ್ಯ ಕಾಂ. ಅನಂತರಾವ್ ಸ್ವಾಗತಿಸಿದರು. ಮತ್ತೊಬ್ಬ ಸದಸ್ಯ ಕಾಂ. ಆರ್. ಶ್ರೀನಿವಾಸ್ ವಂದಿಸಿದರು.

●

ಕೇರಳದಲ್ಲಿ ಕಾಂಗ್ರೆ- ಬಿ. ಜೆ. ಪಿ. ಮುಸ್ಲಿಂ ಲೀಗ್ ಸಂಚು

ಕೇರಳದಲ್ಲಿ ಜುಲೈ 30ರಂದು ನಡೆದ "ಪ್ರತಿಭಟನಾ ದಿನ"ದಲ್ಲಿ ಒಬ್ಬ ಪೋಲೀಸ್ ಕಲ್ಲೇಟಿನಿಂದ ಸತ್ತ, ಮೂವರು ಪೋಲೀಸರಿಂದ ಏಟುತಿಂದು ಸತ್ತರು, ಸರ್ಕಾರದ ಹಲವಾರು ಲಕ್ಷ ರೂ. ಆಸ್ತಿ ನಷ್ಟವಾಯಿತು.

"ಅಲ್ಪಸಂಖ್ಯಾತ ವಿರೋಧಿ" ಭಾಷಾ ನೀತಿ ಎಂದು ಕೇರಳ ಸರ್ಕಾರವನ್ನು ದೂಷಿಸಿ ಕಾಂಗ್ರೆ-ಬಿ ಜೆ ಪಿ, ಮುಸ್ಲಿಂಲೀಗ್‌ಗಳು ಚಳುವಳಿ ಹೂಡಲು ಕರೆಕೊಟ್ಟವೆ. ಈ ಕಾರ್ಯಕ್ರಮದಲ್ಲಿ ವಿರೋಧ ಪಕ್ಷಗಳ ವಿದ್ಯಾರ್ಥಿ ಸಂಘಟನೆಗಳ ಒಂದು ದಿನದ ಮುಷ್ಕರ, ವಿರೋಧ ಪಕ್ಷಗಳ ಟ್ರೇಡ್‌ಯೂನಿಯನ್‌ಗಳು ಕರೆಕೊಟ್ಟಿದ್ದ ಒಂದು ದಿನ ರಾಜ್ಯಸಾರಿಗೆ ಆಯುಶಸ್ತ್ರ ಮುಷ್ಕರ ಇವೆಲ್ಲವೂ ಸೇರಿವೆ.

ಇಂಡಿಯನ್ ಯೂನಿಯನ್ ಮುಸ್ಲಿಂಲೀಗ್‌ನ ಮಲೆಯಾಳ ಪತ್ರಿಕೆಯಾದ ಚಂದ್ರಿಕವು ರಂಜಾನಿನ ತಿಂಗಳಲ್ಲಿ "ಎಲ್ಲ ತ್ಯಾಗ"ಗಳನ್ನೂ ಮಾಡುವಂತೆ ಮುಸ್ಲಿಮರಿಗೆ ಕರೆಕೊಟ್ಟಿತ್ತು.

ಶಿಕ್ಷಣದ ಮಟ್ಟವನ್ನು ಹೆಚ್ಚಿಸಲು ಸರ್ಕಾರ ಕೆಲವು ಕ್ರಮಗಳನ್ನು ಕೈಗೊಂಡಿದೆ. ಅರೇಬಿಕ್, ಉರ್ದು, ಸಂಸ್ಕೃತ, ಸಂಗೀತಗಳ ಶಿಕ್ಷಕರಿಗೆ ಸಾಮಾನ್ಯ ಶಿಕ್ಷಾರ್ಹತೆ ಎಸ್ಸೆಸ್ಸೆಲ್ಸಿ ಇರಬೇಕು, ಈ ವಿಷಯಗಳನ್ನು ಆರಿಸಿಕೊಳ್ಳುವ ವಿದ್ಯಾರ್ಥಿಗಳು ಆಯ್ಕೆಯ ಬಗ್ಗೆ ಲಿಖಿತರೂಪದಲ್ಲಿ ಕೊಡಬೇಕು, ವಿದ್ಯಾರ್ಥಿಗಳ ಸಂಖ್ಯೆಯ ಮೇಲೆ ಶಿಕ್ಷಕರ ನೇಮಕ ಆಗಬೇಕು, ವಿಷಯಗಳ ಬೋಧನೆಗಳಿಗೆ ಶಾಲೆಗಳಲ್ಲಿ ಸರಿಯಾದ ಸ್ಥಳಾವಕಾಶ ಇರಬೇಕು ಎಂಬ ಕ್ರಮಗಳನ್ನು ಸರ್ಕಾರ ಉದ್ದೇಶಿಸಿದೆ. ಇವು "ಅಲ್ಪಸಂಖ್ಯಾತ ವಿರೋಧಿ" ಎಂದು ಹೇಳುವಲ್ಲಿ ಮಿಕ್ಕದಕ್ಕಿಂದ ಭಾರತೀಯ ಜನತಾಪಕ್ಷವೂ ಸೇರಿರುವುದು ಸೋಜಿಗ!

ಕೇರಳದಲ್ಲಿ ಅರೇಬಿಕ್, ಉರ್ದುಗಳನ್ನು ಶಾಲೆಯಲ್ಲಿ ಬೋಧಿಸುವ ಹಾಗೆ ಇತರ ಕಾಂಗ್ರೆ ಆಡಳಿತದ ರಾಜ್ಯಗಳಲ್ಲಿ ಆ ಅವಕಾಶ ಇಲ್ಲ, ಮಿಕ್ಕ ಕಡೆ ಸುಮ್ಮನಿರುವ ಬಿಜೆಪಿ ಕೇರಳದಲ್ಲಿ ದನಿ ಎತ್ತಿದೆ. ಮುಸ್ಲಿಂ ಲೀಗ್‌ಗೆ ಕೂಡ ಇತರ ರಾಜ್ಯಗಳ ಚಿಂತೆ ಇಲ್ಲ. ಇವೆಲ್ಲ ಕೇರಳ ಸರ್ಕಾರವನ್ನು ವಿರೋಧಿಸಲು ಒಂದು ನೆವ ಅಷ್ಟೇ.

●

ಉಜಿರೆಯಲ್ಲಿ ರೈತರ ಮತಪ್ರದರ್ಶನ

ದಿನದಿಂದ ದಿನಕ್ಕೆ ಬೆಳೆದುಬರುತ್ತಿರುವ ಸಾಲಗಳ ಸಂಪೂರ್ಣ ರದ್ಧತಿಗಾಗಿ, ದಂಡ ಬಡ್ಡಿ ವಸೂಲಿ, ಕೃಷಿ ಯುತ್ತು, ಡಿಕ್ರಿ, ಅಮ್ಲುಜಾರಿ, ಜಪ್ತುಗಳಿಗೆ ಇದಿರಾಗಿ ದ. ಕನ್ನಡ ಜಿಲ್ಲೆಯ ಉಜಿರೆಯಲ್ಲಿ ರೈತರು ಇತ್ತೀಚೆಗೆ ಮತಪ್ರದರ್ಶನ ನಡೆಸಿದರು.

ಚಿಕ್ಕ ರೈತರ ಎಲ್ಲಾ ಸಾಲಗಳನ್ನು ಕೈಬಿಡುವಂತೆ, ಸಾಲವಸೂಲಿಯ ನೋಟೀಸು, ಕೃಷಿಯುತ್ತು ಮತ್ತು ಅಮ್ಲುಜಾರಿಯನ್ನು ಕೊಡುವುದನ್ನು ಕೂಡಲೇ ನಿಲ್ಲಿಸಬೇಕು ಮತ್ತು ಸಣ್ಣ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಕ್ಕುವ ವ್ಯವಸ್ಥೆಯಾಗಬೇಕೆಂಬ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವೊಂದನ್ನು ಜಿಲ್ಲಾ ಸಹಕಾರಿ ಸಂಘದ ಉಪಕಾರ್ಯದರ್ಶಿಗಳಿಗೆ ಉಜಿರೆ ಸೇವಾ ಸಹಕಾರ ಸಂಘದ ಕಾರ್ಯದರ್ಶಿಯ ಮೂಲಕ ಸಲ್ಲಿಸಲಾಯಿತು. ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಕೆ. ವಿ. ಯಳಚಿತ್ತಾಯ ಅವರು ರೈತ ಮತಪ್ರದರ್ಶನದ ನಾಯಕತ್ವ ವಹಿಸಿದ್ದರು.

○

ಆರ್. ಚಂದ್ರ

ಆರ್ಥಿಕ ಸಮೀಕ್ಷೆ:

ಬುಡಕಟ್ಟು ಜನರಿಂದ ಭೂಮಿಯ ಪರಾಧೀನತೆ

ಬುಡಕಟ್ಟು ಜನರಿಂದ ಭೂಮಿಯನ್ನು ಪರಾಧೀನಗೊಳಿಸುವುದು ವರ್ಷವರ್ಷಕ್ಕೂ ದೇಶಾದ್ಯಂತ ಹೆಚ್ಚುತ್ತಿದೆ ಎಂದು ಸರಕಾರದ ಅಧಿಕೃತ ಮೂಲಗಳಿಂದಲೇ ತಿಳಿದುಬಂದಿದೆ. ಬುಡಕಟ್ಟು ಜನರಿಂದ ಭೂಮಿಯನ್ನು ಪರಾಧೀನಗೊಳಿಸದಂತೆ ಹದಿನಾರು ರಾಜ್ಯಗಳಲ್ಲಿ ಶಾಸನಗಳೇನೋ ಇವೆ. ಆದರೆ, ಅವುಗಳನ್ನು ತೃಪ್ತಿಕರವಾಗಿ ಕಾರ್ಯಗತಗೊಳಿಸಲಾಗುತ್ತಿಲ್ಲ. ಮಹಾರಾಷ್ಟ್ರ, ಒರಿಸ್ಸಾ, ಆಂಧ್ರಪ್ರದೇಶ, ಅಸ್ಸಾಂ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಪರಾಧೀನಗೊಳಿಸಿದ ಭೂಮಿಯನ್ನು ಬುಡಕಟ್ಟು ಜನರಿಗೇ ಮರಳಿ ಕೊಡುವ ಕೆಲಸ ನಿಧಾನವಾಗುತ್ತಿವೆ ಎಂಬು ವಿಶೇಷ ಅಧ್ಯಯನ ಒಂದರಿಂದ ತಿಳಿದು ಬಂದಿದೆ. ಹೆಚ್ಚಾಗಿ ಅಂತಹ ವಿವಾದಗಳು ಬುಡಕಟ್ಟು ಜನರ ವಿರುದ್ಧವಾಗಿಯೇ ತೀರ್ಮಾನಗೊಂಡಿವೆ. ಉದಾ:

ಕಟ್ಟುನಿಟ್ಟಾಗಿ ಕಾರ್ಯಗತಗೊಳಿಸುವಂತೆಯೂ, ಪರಾಧೀನಗೊಳಿಸಿದ ಭೂಮಿಯನ್ನು ಆ ಬಡಜನರಿಗೇ ಮರಳಿ ಕೊಡಿಸುವಂತೆಯೂ ಆದೇಶ ನೀಡಿದೆ. ಆದರೆ, ಆದೇಶವನ್ನು ಅನುಸರಿಸುವವರು ಯಾರು? ಇತ್ತೀಚೆಗೆ ಪತ್ರಿಕೆಗಳಲ್ಲಿನ ವರದಿಗಳಂತೆ ಬುಡಕಟ್ಟು ಜನರಿಗೆ ವಿತರಣೆಯಾದ ಭೂಮಿಯನ್ನು ಕಾಲಕ್ರಮೇಣ ಸ್ಥಳೀಯ ಪ್ರತಿಷ್ಠಿತ ವ್ಯಕ್ತಿಗಳು ಪ್ರತ್ಯಕ್ಷ ಅಥವಾ ಬಿನಾಮಿಯಾಗಿ ಅವರಿಂದ ಪರಾಧೀನಗೊಳಿಸಿ ತಮ್ಮದಾಗಿಸಿಕೊಳ್ಳುತ್ತಿದ್ದಾರೆ ಅಂತಹವರಲ್ಲಿ ಕಾಂಗ್ರೆಸ್ ಮಂತ್ರಿಗಳೂ ಮತ್ತಿತರ ಪುಢಾರಿಗಳೂ ಇದ್ದಾರೆ ಎನ್ನುವುದು ಕರ್ನಾಟಕ ಮತ್ತು ಆಂಧ್ರಪ್ರದೇಶದ ವರದಿಗಳಿಂದ ಸ್ಪಷ್ಟವಾಗಿದೆ. ಬೇಲಿಯೇ ಹೊಲಮೇದರೆ ಏನು ಮಾಡುವುದು?

ಎಲ್ಲಿಯವರೆಗೆ ಭಾರತದ ಗ್ರಾಮೀಣ ಧೀನಗೊಳ್ಳುವ ಸಂಭವ ಇದ್ದೇ ಇರುವುದು. ಬಡರೈತರು ತಮ್ಮ ಆರ್ಥಿಕ ದುಃಸ್ಥಿತಿಗಳಿಂದಾಗಿ ತಮ್ಮ ಭೂಮಿಯಲ್ಲಿ ಲಾಭದಾಯಕವಾಗಿ ಬೆಳೆ ಬೆಳೆಯಲು ಅಸಮರ್ಥರಾಗಿ ಭೂಮಾಲಕರ ವಕ್ರದೃಷ್ಟಿಗೆ ಬಲಿಯಾಗಿ ಭೂಹೀನರಾಗಿ ಅಸಂಖ್ಯಾತ ಕೃಷಿಕೂಲಿಗಾರರ ಸಂಖ್ಯೆಗೆ ಸೇರುತ್ತಿರುವರು.

ಕಳೆದ ಮೂವತ್ತು ವರ್ಷಗಳ ಕಾಂಗ್ರೆಸ್ ಆಡಳಿತಾವಧಿಯಲ್ಲಿ ಬುಡಕಟ್ಟು ಜನರಿಂದ ಪರಾಧೀನಗೊಳಿಸಿದ ಭೂಮಿಯನ್ನು ತ್ರಿಪುರಾದಲ್ಲಿ ಭಾರತದ ಮಾರ್ಕ್ಸ್‌ವಾದಿ ನೇತೃತ್ವದಲ್ಲಿನ ಎಡರಂಗ ಸರಕಾರವು ಈಗ ಮೂರು ವರ್ಷಗಳಿಂದ ಬುಡಕಟ್ಟು ಜನರಿಗೇ ಮರಳಿಸುವಲ್ಲಿ ಯಶಸ್ವಿಯಾಗಿರುವುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಆ ಕಾರಣದಿಂದಲೇ

ರಾಜ್ಯಗಳು	ಭೂಮಿ ಪರಾಧೀನಗೊಳಿಸಿದ ವಿವಾದಗಳು	ಒಟ್ಟು ತೀರ್ಮಾನಗೊಂಡ ವಿವಾದಗಳು (ಏಪ್ರಿಲ್ 80ರವರೆಗೆ)	ಬುಡಕಟ್ಟು ಜನರ ವಿರುದ್ಧ ತೀರ್ಮಾನಗೊಂಡವಿವಾದಗಳು	ಬುಡಕಟ್ಟು ಜನರಪರವಾಗಿ ತೀರ್ಮಾನಗೊಂಡ ವಿವಾದಗಳು
ಮಹಾರಾಷ್ಟ್ರ	47332	43643	25912	17731
ಒರಿಸ್ಸಾ	46990	43990	21612	22378
ಆಂಧ್ರಪ್ರದೇಶ	49360	46000	24000	22000

(ಸಾಧಾರ: ಇಂಡಿಯನ್ ಎಕ್ಸ್‌ಪ್ರೆಸ್, 21-8-80)

ಇತ್ತೀಚೆಗೆ ಕೇಂದ್ರಸರಕಾರ ರಾಜ್ಯ ಸರಕಾರಗಳಿಗೆ ಬುಡಕಟ್ಟು ಜನರಿಂದ ಭೂಮಿಯನ್ನು ಪರಾಧೀನಗೊಳಿಸುವುದರ ವಿರುದ್ಧವಾಗಿರುವ ಶಾಸನಗಳನ್ನು ಪ್ರದೇಶಗಳಲ್ಲಿ ಭೂಮಾಲಕರು ಪ್ರಬಲರಾಗಿರುವರೋ, ಅಲ್ಲಿಯವರೆಗೆ ಬುಡಕಟ್ಟು ಜನರ ಮತ್ತಿತರ ಬಡಜನರ ಭೂಮಿಯು ಯಾವತ್ತಾದರೂ ಪರಾ ಇಂದಿರಾಕಾಂಗ್ರೆಸ್, ಅಮ್ರಬಂಗಾಳಿ ಮುಂತಾದ ವಿರೋಧ ಪಕ್ಷಗಳು ಎಡರಂಗ ಸರಕಾರದ ವಿರುದ್ಧ ಉರಿಕಾರುತ್ತಿರುವುದು!

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೇಶನ್ ಕಾರ್ಡುಗಳ ನೀಡಿಕೆಯಲ್ಲಿ ಬಿಗಿ ಧೋರಣೆ!

ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಇತರ ಪ್ರದೇಶಗಳಲ್ಲಿ ರೇಶನ್ ಕಾರ್ಡುಗಳ ನೀಡಿಕೆಯಲ್ಲಿ ಬಿಗಿ ಧೋರಣೆಯನ್ನು ಅನುಸರಿಸಲಾಗುವುದೆಂದು ಇತ್ತೀಚೆಗೆ ಜಿಲ್ಲಾ ಡೆಪ್ಯುಟಿ ಕಮಿಶನರ್ ಆದ ಶ್ರೀ ಎಸ್.ಕೆ. ದಾಸ್ ಅವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು (ಇಂಡಿಯನ್ ಎಕ್ಸ್‌ಪ್ರೆಸ್: 20-8-80). ಹೊಸ ಧೋರಣೆಯ ಕೆಲವು ಅಂಶಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

1. ರೇಶನ್ ಕಾರ್ಡುಉಳ್ಳವರೆಲ್ಲರೂ ಹೊಸ ಕಾರ್ಡುಗಳನ್ನು ಪಡೆಯಬೇಕು.

2. ಹೊಸ ಕಾರ್ಡಿಗಾಗಿ ಅರ್ಜಿ ಫಾರ್ಮಿಗೆ 50 ಪೈಸೆಯನ್ನು ಟ್ರೆಜರಿಯಲ್ಲಿ ಪಾವತಿ ಮಾಡಬೇಕು.

3. ಅರ್ಜಿ ಫಾರ್ಮಿಗೆ 50ಪೈಸೆ ಕೋರ್ಟ್ ಫೀ ಸ್ಟ್ಯಾಂಪು ಬೇರೆ ಹಚ್ಚಬೇಕು.

4. ಅಷ್ಟೇ ಅಲ್ಲದೆ, ಕುಟುಂಬದ ಸದಸ್ಯರ ಸಂಖ್ಯೆಯ ಕುರಿತು ಒಂದು ದೃಢೀಕರಣ ಪತ್ರವನ್ನು ರೂ. 5ರ ಠಸೆ ಕಾಗದದಲ್ಲಿ ಬರೆದುಕೊಡಬೇಕು.

5. ಅರ್ಜಿ ಫಾರ್ಮನ್ನು ನಗರಗಳಲ್ಲಿ 'ಆಹಾರ ಅಧಿಕಾರಿಗೆ' ಸಲ್ಲಿಸಬೇಕು. ಹಳ್ಳಿಗಳಲ್ಲಿ ಸಂಬಂಧಪಟ್ಟ ತಾಲ್ಲೂಕು ತಹಸೀಲ್‌ದಾರರಿಗೆ ಸಲ್ಲಿಸಬೇಕು.

6. ರೇಶನ್ ಕಾರ್ಡು ಕಳೆದು ಹೋದರೆ, ಹೊಸ ಕಾರ್ಡು ಪಡೆಯಲು ರೂ. 3ರಷ್ಟು ದಂಡ ತೆರಬೇಕು.

7. ಹರಿದು ಹೋದ ರೇಶನ್ ಕಾರ್ಡಿನ ಬದಲಿಗೆ ಹೊಸ ಕಾರ್ಡನ್ನು ಪಡೆಯಲು ರೂ. 1ರಷ್ಟು ದಂಡ ತೆರಬೇಕು.

8. ರೇಶನ್ ಕಾರ್ಡಿನಲ್ಲಿ ಪುಟಗಳು ಮುಗಿದು ಹೋದರೆ, ಹೊಸ ಪುಟಗಳನ್ನು ಸೇರಿಸಲು 50ಪೈಸೆ ಪಾವತಿ ಮಾಡಬೇಕು.

9. ಈ ಪರದಾಟ ಇಲ್ಲಿಗೇ ಮುಗಿಯಲಿಲ್ಲ! ಒಂದು ಕುಟುಂಬದಲ್ಲಿ ಮಗು ಒಂದು ಹುಟ್ಟಿದರೆ, ಅದರ ಹೆಸರನ್ನು ರೇಶನ್ ಕಾರ್ಡಿನಲ್ಲಿ ಸೇರಿಸಬೇಕಾದರೆ, ಮಗುವಿನ ಜನನ ದಾಖಲೆಯನ್ನು ರೂ. 5ರ ಠಸೆ ಕಾಗದದಲ್ಲಿ ನೀಡುವ ದೃಢೀಕರಣ ಪತ್ರದೊಂದಿಗೆ ಸಲ್ಲಿಸಬೇಕು.

10. ಕಾರ್ಡಿನಲ್ಲಿದ್ದ ಕುಟುಂಬದ ಸದಸ್ಯರ ಹೆಸರನ್ನು ತೆಗೆದುಹಾಕಲು ಸುದೈವದಿಂದ ಯಾವ ಫೀಸನ್ನೂ ಕೊಡಬೇಕಾಗಿಲ್ಲ!

* * *

ಜಿಲ್ಲೆಯಲ್ಲಿ 763 ನ್ಯಾಯ ಬೆಲೆ ಅಂಗಡಿಗಳಿದ್ದು 3, 47, 472 ರೇಶನ್ ಕಾರ್ಡು ಪಡೆದವರಿದ್ದಾರೆ. ಹಳೆಯ ಕಾರ್ಡುಗಳ ಬದಲಿಗೆ ಹೊಸ ಕಾರ್ಡುಗಳನ್ನು ಪಡೆಯುವಷ್ಟರಲ್ಲಿ ಕಾರ್ಡು ಒಂದಕ್ಕೆ ರೂ. 6ರಂತೆ ಜಿಲ್ಲೆಯ ಖಜಾನೆಗೆ ರೂ. 20.85 ಲಕ್ಷ ಹಣ ಜಮಾ ಆಗುವ ನಿರೀಕ್ಷೆ ಇದೆ.

ರೇಶನ್ ಕಾರ್ಡುಗಳ ನೀಡಿಕೆಯಲ್ಲಿ, ಕುಟುಂಬದ ಸದಸ್ಯರ ಸಂಖ್ಯೆಯಲ್ಲಿ, ಅವಶ್ಯಕ ಸಾಮಗ್ರಿಗಳ ವಿತರಣೆಯಲ್ಲಿ ಅಕ್ರಮ ಅತ್ಯಾಚಾರಗಳು ನಡೆಯುತ್ತಿರುವುದರಿಂದ ಇಂತಹ ಬಿಗಿ ಧೋರಣೆಗಳನ್ನು ಅನುಸರಿಸಲು ನಿಶ್ಚಯಿಸಲಾಗಿದೆ ಎಂದು ಡೆಪ್ಯುಟಿ ಕಮಿಶನರ್ ಹೇಳುತ್ತಿದ್ದಾರೆ. ಆದರೆ, ಇಂತಹ ಬಿಗಿ ನೀತಿಯಿಂದಾಗಿ ಜಿಲ್ಲೆಯ ಅಸಂಖ್ಯಾತ ನಿರಕ್ಷರಸ್ಥ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಬಡಜನರಿಗೆ ಆಗುವ ಕಷ್ಟನಷ್ಟಗಳನ್ನು ಅಧಿಕಾರಿಗಳು ಪರಿಶೀಲಿಸಿರುವರೆ? ಒಂದು ರೇಶನ್ ಕಾರ್ಡು ಪಡೆಯಲು ಟ್ರೆಶರಿ ಆಫೀಸಿಗೆ, ತಾಲ್ಲೂಕು ಆಫೀಸಿಗೆ, ಆಹಾರ ಅಧಿಕಾರಿಯ ಆಫೀಸಿಗೆ ಅಲೆಯಬೇಕೆ? ಅದಕ್ಕಾಗಿ ಹತ್ತು ಹಲವು ಫೀಸುಗಳನ್ನು ತೆರಬೇಕೆ? ಇದೇನು ಪ್ರಜಾಪ್ರಭುತ್ವವೇ ಅಥವಾ ತೊಗಲಕ್ ದರ್ಬಾರವೆ? ಇಂತಹ ಬಿಗಿ ಧೋರಣೆಯಿಂದ ಬಡಗ್ರಾಹಕರು ನ್ಯಾಯಬೆಲೆಯ ಅಂಗಡಿಗಳಿಂದ ದೂರ ಸರಿದು ವ್ಯಾಪಾರಿಗಳ ಬಲೆಗೆ ಬೀಳುವುದರಲ್ಲಿ ಸಂಶಯವಿಲ್ಲ. ಪಡಿತರ ಪದ್ಧತಿಯ ಆಡಳಿತ ವೆಚ್ಚವನ್ನು ಬಡಗ್ರಾಹಕರಿಂದಲೇ ಅದಷ್ಟು ಸಂಗ್ರಹಿಸುವುದೇ ಹೊಸ ಧೋರಣೆಯ ಉದ್ದೇಶವಾಗಿದೆ.

* * *

ಬಡಗ್ರಾಹಕರ ನಿರೀಕ್ಷೆಗಳೇನು? ಎಲ್ಲಾ ಜೀವನಾವಶ್ಯಕ ವಸ್ತುಗಳನ್ನು ನ್ಯಾಯಬೆಲೆಯ ಅಂಗಡಿಗಳ ಮೂಲಕವೇ ವಿತರಣೆ ಮಾಡಬೇಕು. ರೇಶನ್ ಕಾರ್ಡುಗಳನ್ನು ನ್ಯಾಯಬೆಲೆ ಅಂಗಡಿಗಳಿಂದಲೇ ವಿತರಣೆ ಮಾಡಬೇಕು. ಗ್ರಾಹಕರು ಬೇರೆಬೇರೆ ಕಛೇರಿಗಳಿಗೆ ಅಲೆದಾಡುವಂತಾಗಬಾರದು. ಪ್ರತಿ ಒಂದು ಕುಟುಂಬದ ಸರಾಸರಿ ಸಂಖ್ಯೆ 4-5 ಎಂದು ತಿಳಿಯಬೇಕು. ಕುಟುಂಬದ ಸಂಖ್ಯೆ ಇದಕ್ಕಿಂತ ಹೆಚ್ಚಾಗಿದ್ದರೆ ಸೂಕ್ತ ಪುರಾವೆಗಳನ್ನು ಪಡೆಯಬೇಕು. ಅದಕ್ಕಾಗಿ ಮತದಾರರ ಪಟ್ಟಿಯನ್ನು ಪರಿಶೀಲಿಸಬಹುದು. ಮುನಿಸಿಪಾಲಿಟಿ, ಪಂಚಾಯತು ದಾಖಲೆಗಳನ್ನು ಪರಿಶೀಲಿಸಬಹುದು. ಅರ್ಜಿ ಫಾರ್ಮಿನ ಎಲ್ಲಾ ಫೀಸುಗಳನ್ನೂ ರದ್ದು ಮಾಡಬೇಕು, ಅವಶ್ಯವಿದ್ದರೆ, ಸಾಂಕೇತಿಕವಾಗಿ ಫಾರ್ಮ್ ಒಂದಕ್ಕೆ 10 ಅಥವಾ 20 ಪೈಸೆ ಫೀ ಪಡೆಯಬಹುದು. ಬಡಗ್ರಾಹಕರಿಗೆ ಅಧಿಕಾರಿಗಳಿಂದ, ಪಡಿತರ ಅಂಗಡಿಗಳ ಸಿಬ್ಬಂದಿಗಳಿಂದ ಯಾವುದೇ ಕಿರುಕುಳ ಇರಕೂಡದು.

ರಾಜ್ಯಾದ್ಯಂತ ಬೆಲೆಏರಿಕೆಯವಿರುದ್ಧವಾದ ಚಳವಳಿಯ ಬಿಸಿಯನ್ನು ಆರಿಸಲು ವ್ಯಾಪಾರಿಗಳು ಈಗಾಗಲೇ ಅಧಿಕಾರಿಗಳನ್ನೂ ಮಂತ್ರಿಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಾಂಕೇತಿಕವಾಗಿ ಬೆಲೆ ಇಳಿಸಿರುವುದಾಗಿ ಪತ್ರಿಕೆಗಳಲ್ಲೆಸೋ ಘೋಷಿಸುತ್ತಿದ್ದಾರೆ. ಆದರೆ, ಅಂಗಡಿಗಳಲ್ಲಿ ಬೆಲೆಗಳು ಏರುತ್ತಿವೆಯೇ ಹೊರತು ಇಳಿಯುತ್ತಿಲ್ಲ. ಅಕ್ರಮ ಸಂಗ್ರಹಗಾರರ ವಿರುದ್ಧ, ನಿಗದಿಯಾದ ಬೆಲೆಗಳಿಗಿಂತ ಹೆಚ್ಚಿನ ಬೆಲೆಗೆ ಮಾರಾಟಮಾಡುವವರ ವಿರುದ್ಧ, ಲಾಭಕೋರರ ವಿರುದ್ಧ ಹೆಚ್ಚಿನ ಬಿಗಿ ಧೋರಣೆಯನ್ನು ತಳೆಯಬೇಕು.

●

ಬೆಲೆಏರಿಕೆ ವಿರುದ್ಧ ಸಹಿ ಸಂಗ್ರಹ

ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ಪ್ರತಿಭಟಿಸಲು ದಾಂಡೇಲಿಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಖೆ ಸಹಿಸಂಗ್ರಹ ನಡೆಸಿದೆ. ತಹಸೀಲ್ದಾರರಿಗೆ ಅರ್ಪಿಸಿದ ಮನವಿಯಲ್ಲಿ 500 ಜನರ ಸಹಿ ಸಂಗ್ರಹಿಸಲಾಗಿದೆ. ಕಾಂ ಪವಾರ, ಉಡಚಪ್ಪ, ಉಮೇಶನಾಯ್ಕ, ಭಾಸ್ಕರ ನಾಯ್ಕ, ಟಿ ಎಸ್. ನಾಯ್ಕ, ಮತ್ತಿತರರು ಈ ಮನವಿಯನ್ನು ಅರ್ಪಿಸಿದ್ದಾರೆ. ಇದರ ಪ್ರತಿಯನ್ನು ಕಾರವಾರ ಜಿಲ್ಲಾ ಡೆಪ್ಯುಟಿ ಕಮೀಷನರಿಗೂ ಕಳಿಸಲಾಗಿದೆ.

○

ರದ್ದುಮಾಡಿದ ಸ್ಟ್ಯಾಂಪ್ ಕರ ವಸೂಲಿ

ಸರ್ಕಾರವು 1977ರಲ್ಲಿ ಹೊರಡಿಸಿದ ಸುತ್ತೋಲೆ ಪ್ರಕಾರ ಹರಿಜನ ಗಿರಿಜನ ವಿದ್ಯಾರ್ಥಿಗಳ ಜಾತಿ ಸರ್ಟಿಫಿಕೇಟಿಗೆ ಸ್ಟ್ಯಾಂಪ್‌ಡ್ಯೂಟಿ ರದ್ದು ಮಾಡಲಾಗಿದೆ. ಆದರೆ ಅಧಿಕಾರಿಗಳು ನಿರ್ಲಕ್ಷದಿಂದ ವಸೂಲು ಮಾಡುತ್ತಿದ್ದಾರೆ. ಈ ಬಗ್ಗೆ ಮತ್ತು ಹರಿಜನ ಹಾಸ್ಟೆಲ್‌ಗಳ ಸ್ಥಿತಿ ಬಗ್ಗೆ ಗಮನಹರಿಸಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್‌ನ ಗಂಗಾವತಿ ಶಾಖೆ ಕರ್ನಾಟಕದ ಕಂದಾಯ ಸಚಿವರಲ್ಲಿ ಮನವಿಮಾಡಿದೆ.

●

ಜೈಪುರದಲ್ಲಿ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಸಭೆ

ದುಡಿಯುವ ಮಹಿಳೆಯರ ಅಖಿಲ ಭಾರತ ಸಮನ್ವಯ ಸಮಿತಿಯು ಆಗಸ್ಟ್ 9 ಮತ್ತು 10ರಂದು ಜೈಪುರದಲ್ಲಿ ಸಭೆ ಸೇರಿ, ಕಳೆದ 5 ತಿಂಗಳಿನ ಕೆಲಸಗಳನ್ನು ಪರಿಶೀಲಿಸಿ ಮುಂದಿನ ಕಾರ್ಯಕ್ರಮದ ಬಗ್ಗೆ ಚರ್ಚಿಸಿತು.

ಕೇರಳ, ತಮಿಳು ನಾಡು, ಆಂಧ್ರ ಪ್ರದೇಶ, ಮಹಾರಾಷ್ಟ್ರ, ರಾಜಾಸ್ಥಾನ, ಮತ್ತು ಭಿಲಾಯ್, ಕಾನ್ಪುರ, ಅಹಮದಾಬಾದ್, ಬರೋಡ ದೆಹಲಿಗಳಲ್ಲಿ ಈಗಾಗಲೇ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಗಳನ್ನು ರಚಿಸಲಾಗಿದೆ. ಎಲ್ಲ ಪ್ರದೇಶಗಳಿಂದ ಬಂದ ವರದಿಗಳ ಪ್ರಕಾರ ದುಡಿಯುವ ಮಹಿಳೆಯರು ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಸೂಚಿಸಿದ್ದಾರೆ.

ಸಾಮಾನ್ಯ ಹೋರಾಟ :

ಮಹಿಳೆಯರು ಫ್ಯಾಕ್ಟರಿಗಳು, ಸಣ್ಣ ಕೈಗಾರಿಕೆಗಳು, ಅಥವಾ ಕರಕುಶಲ ಕೈಗಾರಿಕೆಗಳು, ಸರ್ಕಾರಿ ಸೇವೆಗಳು, ಅಂಚೆ ತಂತಿ, ಜೀವವಿಮೆ, ಆಸ್ಪತ್ರೆಗಳು, ವಿಮಾನಯಾನ, ಬ್ಯಾಂಕುಗಳು ಹೀಗೆ ಎಲ್ಲಿಯೇ ದುಡಿಯುತ್ತಿರಲಿ, ಅವರಲ್ಲಿ ಅಲ್ಪಸಂಖ್ಯೆಯು ಮಾತ್ರ ಸಂಘಟಿತವಾಗಿದೆ ಅಥವಾ ಟ್ರೇಡ್ ಯೂನಿಯನ್ ಮತ್ತು ಇತರ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಅಥವಾ ಅವರ ಜೀವನ ಪರಿಸ್ಥಿತಿಯ ರಕ್ಷಣೆಗಾಗಿ ನಡೆಸುವ ಹೋರಾಟದಲ್ಲಿ ಭಾಗವಹಿಸುತ್ತದೆ.

ಮುಖ್ಯವಾಗಿ ಸಾಮಾಜಿಕ ಮತ್ತು ಕೌಟುಂಬಿಕ ಕಾರಣಗಳಿಗಾಗಿ ಮಹಿಳೆಯರು ಸಂಘಟಿತ ಚಟುವಟಿಕೆಯ ಹೊರಗಡೆ ಉಳಿಯುತ್ತಾರೆ, ಆದರೆ ಹೋರಾಟದ ಅನೇಕ ಸಮಯಗಳಲ್ಲಿ ಹಲವರು ಮುಂದೆ ಬಂದು ಸಮರ್ಥ ಹೋರಾಟಗಾರರಾಗಿ ಕಾಣಿಸಿಕೊಂಡಿದ್ದಾರೆ. ಕಳೆದ ಆರು ತಿಂಗಳಿಂದ ನಡೆಯುತ್ತಿರುವ ಮದರಾಸಿನ ಬಾಲು ಗಾರ್ಮೆಂಟ್ ಫ್ಯಾಕ್ಟರಿಯ ಮುಷ್ಕರ, ಕಾನ್ಪುರ್ ಟೆಕ್ಸ್‌ಟೈಲ್ ಮಿಲ್ಸ್‌ನ ಮಹಿಳಾ ಕಾಂಟ್ರಾಕ್ಟ್ ಕೆಲಸಗಾರರ ನಾಲ್ಕು ತಿಂಗಳಿನ ಹೋರಾಟ(ಇದರಲ್ಲಿ 45 ವಜಾ ಆದ ಕೆಲಸಗಾರರ ಪುನರ್ನೇಮಕ ಒತ್ತಾಯ ಯಶಸ್ವಿಯಾಯಿತು). ಮಹಾರಾಷ್ಟ್ರದ ನರ್ಸ್‌ಗಳ ಫೆಡರೇಶನ್ನಿನ ಹೋರಾಟ ಇವೆಲ್ಲವೂ ಆ ಸಾಮರ್ಥ್ಯಕ್ಕೆ ಉದಾಹರಣೆಗಳಾಗಿವೆ

ತಮ್ಮ ಸಮಸ್ಯೆಗಳನ್ನು ಸಂಘದ ಗಮನಕ್ಕೆ ತರುವುದಕ್ಕೆ ಮಹಿಳಾ ಕಾರ್ಮಿಕರು ಮತ್ತು ಉದ್ಯೋಗಿಗಳು ಹಿಂತೆಗೆಯುತ್ತಾರೆ. ವಜಾ ಮಾಡುತ್ತೇವೆ ಎಂಬ ಅಧಿಕಾರಿಗಳ ಬೆದರಿಕೆಗೆ ಬಗ್ಗಿ ಭಾನುವಾರಗಳಲ್ಲೂ ಕಚೇರಿಯ ಕೆಲಸ ಮಾಡಲು ಬರುವ ಉದಯರ್‌ಪುರ ಸರ್ಕಾರಿ ಮಹಿಳಾ ಉದ್ಯೋಗಿಗಳ ವಿಚಾರದಲ್ಲಿ ಇದು ಕಂಡುಬಂತು. ಇತ್ತೀಚೆಗೆ ತಾನೇ ಅವರು ಈ ವಿಚಾರವನ್ನು ರಾಜಾಸ್ಥಾನದ ಸಮನ್ವಯ ಸಮಿತಿಯ ಗಮನಕ್ಕೆ ತಂದಾಗ, ಇದನ್ನು ಆಗಸ್ಟ್ 10ರಂದು ವಿಧಾನಸಭೆಯಲ್ಲಿ ಎತ್ತಲಾಯಿತು. ಮಹಿಳೆಯರ ವಿಶೇಷ ಸಮಸ್ಯೆಗಳ ಬಗ್ಗೆ ಕಾರ್ಮಿಕಸಂಘಗಳಿಗೂ ಆಷ್ಟಾಗಿ ತಿಳುವಳಿಕೆ ಇಲ್ಲ ಮತ್ತು ಅವನ್ನು ಲಕ್ಷಿಸುತ್ತಿಲ್ಲ. ಇಂಥ ಒಂದು ಸಮಸ್ಯೆಯೆಂದರೆ ಉದ್ಯೋಗಗಳಲ್ಲಿ ಮೇಲಧಿಕಾರಿಗಳಿಂದ ಆಗುವ ಲೈಂಗಿಕ ಕಿರಿಕಿರಿ. ಇದರಿಂದ ದಿನನಿತ್ಯದ ಕೆಲಸ ಒಂದು ಗೋಳೆನಿಸುತ್ತದೆ. ಇಂಥ ಪ್ರಶ್ನೆಗಳನ್ನು ಸಂಘದ ಮಟ್ಟದಲ್ಲಿ ಮಾತ್ರ ಪರಿಣಾಮಕಾರಿಯಾಗಿ ಪರಿಹರಿಸಬಹುದು. ಇವೆಲ್ಲವೂ ಸಮನ್ವಯ ಸಮಿತಿಗಳ ಅಗತ್ಯವನ್ನು ಒತ್ತಿ ಹೇಳುತ್ತವೆ.

ಟ್ರೇಡ್‌ಯೂನಿಯನ್ನಿನೊಳಗೆ :

ಈ ಅನುಭವದ ಆಧಾರದ ಮೇಲೆ ತಮ್ಮ ಸಂಸ್ಥೆಗಳ ಮಹಿಳಾ ಕಾರ್ಮಿಕರ ಮತ್ತು ಉದ್ಯೋಗಿಗಳ ಸಮಸ್ಯೆಗಳನ್ನು ಪರಿಶೀಲಿಸಲು ಟ್ರೇಡ್‌ಯೂನಿಯನ್ ಒಳಗೆ ವಿಶೇಷ ಸಮಿತಿಗಳನ್ನು ರಚಿಸಬೇಕೆಂದು ಎಲ್ಲ ಟ್ರೇಡ್ ಯೂನಿಯನ್‌ಗಳು ಮತ್ತು ಫೆಡರೇಷನ್‌ಗಳಿಗೆ ಮನವಿಮಾಡಲು ಅಖಿಲ ಭಾರತ ಸಮನ್ವಯ ಸಮಿತಿಯು ಜೈಪುರದ ಸಭೆ ನಿರ್ಧರಿಸಿತು. ಸರಿಯಾದ ವಿಶ್ರಾಂತಿ ಕೋಣೆಗಳು, ಶೌಚಗೃಹಗಳು, ದೂರವಿದ್ದರೆ ಸಾರಿಗೆ, ಶಿಶುಪಾಲನಾ ಕೇಂದ್ರಗಳು ಮುಂತಾದ ವಿಚಾರಗಳಲ್ಲಿ ಹೋರಾಡಬೇಕಾಗಿದೆ. ಕೇರಳದ ಅನೇಕ ಸಂಘಗಳು ವಿಶೇಷ ಸಮಿತಿಗಳನ್ನು ರಚಿಸಿವೆ.

ಅದೇ ವೇಳೆಗೆ ಮಹಿಳಾ ಉದ್ಯೋಗಿಗಳಿಗೆ ವಿವರಿಸಿ, ಅವರನ್ನು ಸಂಘಟಿಸಲು ಮತ್ತು ಬರಿಯ ಸದಸ್ಯರು ಮಾತ್ರ ಆಗಿರದೆ, ಸಮಿತಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ಜೊತೆಗೆ, ಮಹಿಳಾ ಉದ್ಯೋಗಿಗಳ ಸಮಸ್ಯೆಗಳು, ಕಾರ್ಮಿಕ ವರ್ಗದ ಟ್ರೇಡ್ ಯೂನಿಯನ್ ಮತ್ತು ಪ್ರಜಾಸತ್ತಾತ್ಮಕ ಬೇಡಿಕೆಗಳ ಭಾಗವಾಗಿ ಮಾತ್ರ ಪರಿಹಾರವಾಗುತ್ತದೆ ಎಂದು ಅವರಿಗೆ ತಿಳಿಸಲು ಎಲ್ಲ ಸಮನ್ವಯ ಸಮಿತಿಗಳಿಗೆ ಕೇಂದ್ರಸಮಿತಿ ಕರೆಕೊಟ್ಟಿದೆ. ಅಲ್ಲದೆ ಟ್ರೇಡ್‌ಯೂನಿಯನ್ ಸಮಿತಿಗಳಲ್ಲಿ ಸರಿಯಾದ ಪ್ರಾತಿನಿಧ್ಯ, ಕಾರ್ಯಕಾರಿ ಹುದ್ದೆಗಳು ಇವುಗಳಿಗಾಗಿಯೂ ಅವರು ಹೋರಾಡಬೇಕಾಗಿದೆ,

ಮಹಿಳೆಯರ ಮೇಲಿನ ಆಕ್ರಮಣಗಳು :

ಮಹಿಳೆಯರ ಮೇಲಿನ ಅತ್ಯಾಚಾರ ಮುಂತಾದುವು ಹೆಚ್ಚುತ್ತಿರುವ ಬಗ್ಗೆ ಭಾಗ್‌ಪತ್‌ನಂತಹ ನಾಚಿಕೆಗೇಡಿನ ಘಟನೆಗಳ ಬಗ್ಗೆ ದುಡಿಯುವ ಮಹಿಳೆಯರಿಗೆ ತೀವ್ರ ಸಿಟ್ಟು ಇರುವುದನ್ನು ವರದಿಗಳು ತೋರಿಸಿವೆ. ಇಂಥ ಘಟನೆಗಳಿಗೆ ಪ್ರತಿಭಟನೆ ಸೂಚಿಸುವ, ಅವರಲ್ಲೂ ಪೋಲೀಸ್‌ಠಾಣೆಗಳನ್ನು ಇಂಥ ಹೇಯ ಕೃತ್ಯಗಳಿಗೆ ಬಳಸಿಕೊಳ್ಳುವ ಪೋಲೀಸರ ಕಾರ್ಯವನ್ನು ಪ್ರತಿಭಟಿಸುವ ಪ್ರದರ್ಶನಗಳಲ್ಲಿ ಇತರ ಟ್ರೇಡ್‌ಯೂನಿಯನ್‌ಗಳು ಮತ್ತು ಪ್ರಜಾಸತ್ತಾತ್ಮಕ ಸಂಘಟನೆಗಳ ಜೊತೆ ಕೆಲಸ ಮಾಡುವಂತೆ ಸಮನ್ವಯ ಸಮಿತಿಗಳಿಗೆ ತಿಳಿಸಲಾಗಿದೆ. ಆರೋಪಿ ಪೋಲೀಸ್ ಸಿಬ್ಬಂದಿಯನ್ನು ವಜಾ ಮಾಡುವ ಮತ್ತು ಅಂಥವರಿಗೆ ಉಗ್ರಶಿಕ್ಷೆ ನೀಡುವ ಬೇಡಿಕೆಯ ಗೊತ್ತುವಳಿಯನ್ನು ಸ್ವೀಕರಿಸಲಾಗಿದೆ.

ದುಡಿಯುವ ಮಹಿಳೆಯರ ಬಗ್ಗೆ ನಿರ್ಲಕ್ಷ್ಯದ ಧೋರಣೆಯನ್ನು ಅದರಲ್ಲೂ ಉದ್ಯೋಗ, ವೇತನ, ಬಡ್ತಿ ಮತ್ತು ತರಬೇತಿಗಳಲ್ಲಿ ಪಕ್ಷಪಾತ ತೋರಿಸುವುದನ್ನು ಇಂಡಿಯನ್ ಏರ್‌ಲೈನ್ಸಿನ ಗಗನಸಖಿಯರಿಗೆ ತೋರಿಸುವ ಅನ್ಯಾಯದ ಧೋರಣೆಯನ್ನು ವರದಿಗಳು ಬಹಿರಂಗಗೊಳಿಸಿವೆ. ಎಲ್ಲ ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನದ ಮಸೂದೆಯ ಸಲಹೆ ಇರುವಾಗ, ಎಲ್ಲ ಮಹಿಳೆ ಮತ್ತು ಪುರುಷ ಕಾರ್ಮಿಕರಿಗೂ ಸಮಾನ ವೇತನ ಜಾರಿಯ ಮಸೂದೆಯನ್ನು ಎಲ್ಲ ಸಂಘಗಳು ಒತ್ತಾಯಿಸಬೇಕು,

ಜಂಟಿ ಪ್ರಚಾರಗಳು :

ಒಂದೇ ಕೆಲಸವನ್ನು ಮಾಡುವಾಗಲೂ ಮಹಿಳೆಯರಿಗೆ ಕಡಿಮೆ ವೇತನವನ್ನು ಒಪ್ಪಿಕೊಳ್ಳುವ, ಮಹಿಳೆಯರಿಗಾಗಿಯೇ ಕಡಿಮೆ ವೇತನದ ಕೆಲಸಗಳನ್ನು ಸೃಷ್ಟಿಸುವ, ಅಥವಾ ಕಡಿಮೆ ವೇತನಗಳನ್ನು ಸಮರ್ಥಿಸುವುದಕ್ಕೆ ಇರುವ ಕೆಲಸವನ್ನು ಇನ್ನೂ ಕೆಳದರ್ಜೆಗೆ ಇಳಿಸುವ ಟ್ರಿಬ್ಯೂನಲ್‌ಗಳು ಮತ್ತು ಯೂನಿಯನ್‌ಗಳು ತಮ್ಮ ಕಾರ್ಯನೀತಿಯನ್ನು ಬದಲಾಯಿಸಿಕೊಳ್ಳುವಂತೆ ಜಂಟಿ ಪ್ರಚಾರಗಳನ್ನು ನಡೆಸಬೇಕಾಗಿದೆ. ಕಡಿಮೆ ವೇತನವನ್ನು ಒಪ್ಪಿಕೊಳ್ಳದಿರುವಂತೆ ದುಡಿಯುವ ಮಹಿಳೆಯರನ್ನು ಸಂಘಟಿಸಿ, ಸಮಾನ ವೇತನಕ್ಕಾಗಿ ಯೂನಿಯನ್‌ಗಳು ಹೋರಾಡುವಂತೆ, ಅವುಗಳಿಗೆ ಒತ್ತಾಯಿಸಬೇಕಾಗಿದೆ. ಅದರಂತೆಯೇ ಟೈಲರಿಂಗ್ ಮುಂತಾದ ಹೆಚ್ಚು ಕುಶಲವಲ್ಲದ ಕೆಲಸಗಳಿಗೆ ಮಾತ್ರ ತರಬೇತಿ ನೀಡಿ, ಎಂಜಿನಿಯರಿಂಗ್ ಉದ್ಯಮಗಳಂಥ ಹೆಚ್ಚು ಕುಶಲ ಕೆಲಸಗಳಿಗೆ ತರಬೇತಿ ನೀಡದಿರುವುದರ ಬಗ್ಗೆಯೂ ಹೋರಾಡಬೇಕಾಗಿದೆ.

ಕೇರಳ ಮತ್ತು ತಮಿಳುನಾಡುಗಳಲ್ಲಿ ಸಮನ್ವಯ ಸಮಿತಿಗಳು ತುಂಬ ಫಲಕಾರಿಯಾಗಿದ್ದು, ಮಹಿಳೆಯರ ಸಾಮಾನ್ಯ ಬೇಡಿಕೆಗಳು ಈಡೇರಿವೆ, ಇವು ಅವರ ಸ್ವಂತ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸುವುದಕ್ಕೆ ಸ್ಫೂರ್ತಿ ಕೊಟ್ಟಿದೆ.

ಅಖಿಲ ಭಾರತ ಸಮನ್ವಯ ಸಮಿತಿಯು ಮುಂದೆ ಮುಂಬಯಿಯಲ್ಲಿ ಸಭೆ ಸೇರಲಿದೆ. ಸಭೆಯ ಅಂತ್ಯದಲ್ಲಿ 800 ಮಹಿಳೆಯರು ಸೇರಿದ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಉದಯರ್‌ಪುರದ ಬುಡಕಟ್ಟು ಮಹಿಳೆಯರ ಮುಂದಾಳು ಎಸ್. ಮೀನಾ ಅವರು ವಹಿಸಿದ್ದರು, ರಾಜಾಸ್ಥಾನದ ಶ್ರಮಜೀವಿ ಮಹಿಳಾ ಸಮಿತಿಯ ಸಂಚಾಲಕಿ ಕಾಂಚನ್ ಶರ್ಮ ಸಮನ್ವಯ ಸಮಿತಿ ಸಭೆಯ ನಿರ್ಣಯಗಳನ್ನು ವರದಿ ಮಾಡಿದರು, ಮಹಾರಾಷ್ಟ್ರದ ಮಹಿಳಾ ಕಾಮಗಾರ್ ಕರ್ಮಚಾರಿ ಪರಿಷತ್‌ನ ಅಧ್ಯಕ್ಷೆ ಅಹಲ್ಯಾ ರಂಗ್ನೇಕರ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸುಶೀಲಗೋಪಾಲನ್ ಅವರು ಪ.ಬಂಗಾಳ, ಕೇರಳ, ತ್ರಿಪುರಾಗಳ ಎಡಸರ್ಕಾರಗಳ ಸಾಧನೆಗಳನ್ನು, ಕೇರಳದ ಮಹಿಳಾ ಚಳುವಳಿಯನ್ನು ಕುರಿತು ಮಾತನಾಡಿದರು.

●

ಮುಂಬೈನಲ್ಲಿ ಕಾರ್ಮಿಕರ, ಮಹಿಳೆಯರ ಪ್ರದರ್ಶನ

ಸಿ. ಐ ಟಿ. ಯು., ಎ. ಐ. ಟಿ. ಯು. ಸಿ., ಹೆಚ್. ಎಂ. ಎಸ್., ಬಿ. ಎಂ ಎಸ್., ಯು ಟಿ.ಯು ಸಿ., ರಾಜ್ಯ ಸರ್ಕಾರಿ ಉದ್ಯೋಗಿಗಳ ಫೆಡರೇಷನ್, ಎಲ್.ಐ ಸಿ. ಮತ್ತಿತರ ಮಧ್ಯಮವರ್ಗ ಉದ್ಯೋಗಿಗಳ ಸಂಘಟನೆಗಳು ಇವುಗಳ ಜಂಟಿ ಆಶ್ರಯದಲ್ಲಿ, ಮುಚ್ಚಿದ ಫ್ಯಾಕ್ಟರಿಗಳು ಪುನಃ ತೆರೆಯಲಿ, ಮುಷ್ಕರಗಳಲ್ಲಿ ಸರ್ಕಾರದ ಪ್ರವೇಶ ಇಂಥ ಬೇಡಿಕೆಗಳಿಗಾಗಿ 20,000 ಕಾರ್ಮಿಕರು ಮುಂಬಯಿಯಲ್ಲಿ ಆಗಸ್ಟ್ 5ರಂದು ಬೃಹತ್ ಪ್ರದರ್ಶನ ನಡೆಸಿದರು, ಆಜಾದ್ ಮೈದಾನದಲ್ಲಿ ಸೇರಿದ್ದ ಈ ಭಾರಿ ಸಮೂಹ ನಂತರ ವಿಧಾನಸಭೆ ಅಧಿವೇಶನವಿದ್ದ ಕೌನ್ಸಿಲ್ ಹಾಲ್‌ಗೆ ತೆರಳಿತು. ಸರ್ಕಾರದ ಮಧ್ಯಪ್ರವೇಶದ ಬಗ್ಗೆ ಒತ್ತಾಯಿಸಿ ಕಾರ್ಮಿಕರು ಹೊರಗೆ ಘೋಷಣೆಗಳನ್ನು ಕೂಗಿದರು. ವಿಧಾನಸಭೆಯಲ್ಲಿ ಸಿ. ಪಿ ಐ (ಎಂ) ಸದಸ್ಯ ಲಹನು ಕೋಮ್ ಈ ಪ್ರಶ್ನೆಯನ್ನು ಎತ್ತಿದರು. ನಂತರ ಎಲ್ಲ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳನ್ನುಳ್ಳ ನಿಯೋಗ ಮುಖ್ಯಮಂತ್ರಿ ಅಂಟುಲೆಯವರನ್ನು ಭೇಟಿಮಾಡಿತು.

ಕಾರ್ಮಿಕವರ್ಗ ಮತ್ತು ಮಧ್ಯಮ ವರ್ಗಗಳ ಈ ಬೇಡಿಕೆಗಳನ್ನು ನಂತರ ಮಹಿಳೆಯರು ಒತ್ತಾಯಿಸಿದರು. ಮಹಿಳೆಯರ ಬೆಲೆಏರಿಕೆ ವಿರೋಧಿ ಜಂಟಿ ಕ್ರಿಯಾಸಮಿತಿಯ ಆಶ್ರಯದಲ್ಲಿ ಬೆಲೆಏರಿಕೆ, ಮಹಿಳೆಯರ ಮೇಲೆ ಆಕ್ರಮಣ ಮುಂತಾದವುಗಳನ್ನು ಗೃಹಿಣಿಯರು ಉದ್ಯೋಗಿಗಳು ಒಟ್ಟಾಗಿ ವಿರೋಧಿಸಿದರು. ಒಂದು ತಿಂಗಳ ಕಾಲದ ಪ್ರಚಾರ ಆಗಸ್ಟ್ 8ರಂದು ಕೊನೆಗೊಂಡು ಈ ಬಗ್ಗೆ ನಿಯೋಗವೊಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿತು.

ಈ ಪ್ರದರ್ಶನದ ನಾಯಕತ್ವವನ್ನು ಅಹಲ್ಯಾ ರಂಗ್ನೇಕರ್, ಮೃಣಾಲ್‌ಗೋರೆ, ತಾರಾರೆಡ್ಡಿ, ಮಂಗಳಾಪಾರಿಖ್ ಮತ್ತು ಪ್ರಮಿಳಾ ದಂಡವಟೆ ವಹಿಸಿದ್ದರು. ಥಾಣೆಗಳು ಹೊಲಗದ್ದೆಗಳಲ್ಲಿ ದುಡಿಯುತ್ತಿರುವ ತಮ್ಮ ಕಾರ್ಮಿಕ ಸೋದರ ಸೋದರಿಯರ ಹಿತಾಸಕ್ತಿಗಳನ್ನು ಕಾಪಾಡುವಂತೆ ಈ ಮಹಿಳೆಯರು ಒತ್ತಾಯಿಸಿದುದು ಒಂದು ವಿಶೇಷ ಬೇಡಿಕೆಯಾಗಿತ್ತು. ●

ಕೋಲಾರದಲ್ಲಿ ಐಕ್ಯತಾ ದಿನಾಚರಣೆ

ಈಶಾನ್ಯ ಭಾರತದಲ್ಲಿ ನಡೆಯುತ್ತಿರುವ ಪ್ರತ್ಯೇಕತಾ ಚಳುವಳಿ, ಕೋಮುಗಲಭೆ, ಅಲ್ಪಸಂಖ್ಯಾತರ ಮೇಲೆ ದಾಳಿ, ಮಹಿಳೆಯರ ಮೇಲಿನ ಅತ್ಯಾಚಾರ, ರೈತಕಾರ್ಮಿಕ ದಲಿತರ ಮೇಲಿನ ದಬ್ಬಾಳಿಕೆ ಇವುಗಳನ್ನು ವಿರೋಧಿಸಿ, ದೇಶದ ಐಕ್ಯತೆಯ ಬಗ್ಗೆ ಕಳಕಳಿಯನ್ನು ತೋರಿಸುವ ಸಲುವಾಗಿ ಕೋಲಾರ ಜಿಲ್ಲೆಯ ಎಸ್. ಎಫ್. ಐ. ಮತ್ತು ಡಿ. ವೈ. ಓ. ಶಾಖೆಗಳು ಐಕ್ಯತಾ ದಿನಾಚರಣೆಯನ್ನು ಆಚರಿಸಿದವು. ಅಂದು ಕರಪತ್ರಗಳನ್ನು ಹಂಚಿ, ಅಸ್ಸಾಂ ಚಳುವಳಿಯ ನಿಜಸ್ವರೂಪವನ್ನು ನಾಗರಿಕರಿಗೆ ವಿವರಿಸಲಾಯಿತು. ○

ಪತ್ರಿಕಾ ವರದಿಗಾರರ ಬಗ್ಗೆ ದೂರು

ತುಮಕೂರು ಜಿಲ್ಲಾ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಏಳು ಪ್ರತಿನಿಧಿಗಳನ್ನೊಳಗೊಂಡ ನಿಯೋಗ ಒಂದು, ಆ ಸಮಿತಿಯು ತಾ. 23-8-80ರಂದು ಕೈಗೊಂಡ ತೀರ್ಮಾನದಂತೆ, ತಾ. 26-8-80 ರಂದು ತುಮಕೂರು ನಗರದಿಂದ ಬೆಂಗಳೂರಿಗೆ ತೆರಳಿ, 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ದಿನ ಪತ್ರಿಕೆಗಳ ಪ್ರಧಾನ ಕಛೇರಿಯಲ್ಲಿ, ಈ ಪತ್ರಿಕೆಗಳ ಪ್ರಧಾನ ಸುದ್ದಿ ಸಂಪಾದಕರುಗಳನ್ನು ಭೇಟಿಮಾಡಿ, ತುಮಕೂರು ನಗರದ ಈ ಪತ್ರಿಕೆಗಳ ಬಾತ್ಮೀದಾರರು ವಿರೋಧ ಪಕ್ಷಗಳ ಹಾಗೂ ಕಾರ್ಮಿಕ ಸಂಘಗಳ ಕಾರ್ಯ ಚಟುವಟಿಕೆಗಳನ್ನು ವರದಿಮಾಡದೆ, ನಿರ್ಲಕ್ಷ ಹಾಗೂ ಪಕ್ಷಪಾತ ಧೋರಣೆ ತಳೆದಿರುವುದನ್ನು ಅವರ ಗಮನಕ್ಕೆ ತಂದಿರುವುದಲ್ಲದೆ, ಆ ಪತ್ರಿಕೆಗಳ ಗೌರ್ನಿಂಗ್ ಡೈರೆಕ್ಟರಾದ ಶ್ರೀ ಕೆ. ಎನ್. ಗುರುಸ್ವಾಮಿಯವರನ್ನು ಕಂಡು ಅವರ ಕಚೇರಿಯಲ್ಲಿ ಸಂಬಂಧಪಟ್ಟ ಸುದ್ದಿ ಸಂಪಾದಕರನ್ನು ಕಂಡು ಸ್ಥಳೀಯ ವರದಿಗಾರರ ಧೋರಣೆ ಬಗ್ಗೆ ದಾಖಲೆಗಳ ಸಮೇತ ಚರ್ಚಿಸಿ, ಪತ್ರಿಕೆಯ ಆಡಳಿತವರ್ಗವು ತ್ವರಿತವಾದ ಹಾಗೂ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಂಡಾಗ, ಆಡಳಿತವರ್ಗದವರು ಈ ಬಗ್ಗೆ ತ್ವರಿತವಾಗಿ ವಿಚಾರಣೆ ನಡೆಸಿ ಸೂಕ್ತ ಕ್ರಮದ ಏರ್ಪಾಡು ಮಾಡುವುದಾಗಿ ಭರವಸೆ ಇತ್ತರು.

ಈ ನಿಯೋಗದಲ್ಲಿ ಸಿ. ಐ. ಟಿ. ಯು.ವಿನ ಕಾಂ. ಕೆ.ಆರ್. ನಾಯಕ್, ಜಿ. ಎಂ. ರಾಜಾಚಾರ್ (ಬಿ.ಜೆ ಪಿ.) ಅಬ್ದುಲ್ ಸುಜಾನ್ (ಮುನಿಸಿಪಲ್ ನೌಕರರ ಸಂಘ), ಡಾ॥ ಚೆರಿಯನ್ (ಐ. ಎನ್. ಟಿ. ಯು ಸಿ.), ಶ್ರೀ ಚಂದ್ರಶೇಖರ್, ಶ್ರೀ ಹನುಮಂತಯ್ಯ ಮತ್ತು ಸರ್ಕಾರಿ ನೌಕರರ ಸಂಘದ ಪ್ರತಿನಿಧಿಗಳಿದ್ದರು.

ಆನಗಳ್ಳಿ ಗ್ರಾಮದಲ್ಲಿ ರೈತ-ಕೃಷಿಕೂಲಿಗಾರರ ವಿಸ್ತೃತ ಸಭೆ

ತಾ. 24-8-1980ರಂದು ದ. ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಆನಗಳ್ಳಿ ಗ್ರಾಮದಲ್ಲಿ ರೈತ-ಕೃಷಿಕೂಲಿಗಾರರ ವಿಸ್ತೃತ ಸಭೆಯು ಕಾಂ. ಶೀನಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಗ್ರಾಮ ಸಮಿತಿಯ ಕಾರ್ಯದರ್ಶಿಯವರು ಸಂಘದ ಚಟುವಟಿಕೆಯ ಬಗ್ಗೆ ಮಾತನಾಡಿದರು. ಸಭೆಯಲ್ಲಿ ಕೆಲವು ಮುಖ್ಯ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಿತು. ದ. ಕ. ಜಿಲ್ಲಾ ಕೃಷಿಕೂಲಿಗಾರರ ಸಂಘಟನಾ ಸಮಿತಿಯ ಸಂಚಾಲಕರಾದ ಕಾಂ. ಕೆ.ಶಂಕರನವರು ರೈತ-ಕೃಷಿಕೂಲಿಗಾರರನ್ನುದ್ದೇಶಿಸಿ ಮಾತನಾಡುತ್ತಾ ರೈತರು ತಾವು ಬೆಳೆಸಿದ ಬೆಳೆಗೆ ಸರಿಯಾದ ಬೆಲೆ ಹಾಗೂ ಇತರ ಸವಲತ್ತುಗಳನ್ನು ಪಡೆಯಲು ಚಳುವಳಿ ಮಾಡುವಾಗಲೇ, ಕೃಷಿಕೂಲಿಗಾರರು ಸಂಘಟನೆಯಾದಿ ಹೆಚ್ಚಿನ ಕೂಲಿ ಪಡೆಯಲು ಹೋರಾಟ ಮಾಡಲು ಮುಂದಾಗಬೇಕೆಂದರು.

ಆನಂತರ ದ. ಕ. ಜಿಲ್ಲಾ ರೈತಸಂಘದ ಅಧ್ಯಕ್ಷರಾದ ಕಾಂ. ಅಬ್ರಹಾಂ ಕರ್ಕಡರವರು ರೈತರು ಹಾಗೂ ಕೃಷಿಕೂಲಿಗಾರರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ರೈತಸಂಘದ ತೀರ್ಮಾನವನ್ನು ವಿವರಿಸುತ್ತಾ, ಈ ಹಿಂದೆ ಸರಕಾರ ನೆರೆ ಪರಿಹಾರವಾದಿ ಕೊಟ್ಟ ಸಾಲವನ್ನು ಮರುಪಾವತಿ ಮಾಡದವರಿಂದ ಜಪ್ತಿ ಹಾಗೂ ಇತರ ಕ್ರೂರ ವಿಧಾನಗಳಿಂದ ವಸೂಲು ಮಾಡುವುದರ ವಿರುದ್ಧ ಮತ್ತು ಅಧಿಕಾರಿಗಳು ಕೊಡುವ ಕಿರುಕುಳವನ್ನು ವಿರೋಧಿಸಿ ಹೋರಾಡಲು ಕರೆ ಇತ್ತರು.

○

ದುಡಿಯುವ ಜನತೆಯ ಬೇಡಿಕೆಗಳಿಗಾಗಿ ಹೋರಾಡಲು ಸಂಘಟಿತ ಕಾರ್ಮಿಕರಿಗೆ ಕರೆ

ಬೆಲೆಏರಿಕೆಯಿಂದಾಗಿ ನಿಶ್ಚಿತ ವರಮಾನವಿರುವ ಕಾರ್ಮಿಕ-ನೌಕರರ ಕೊಳ್ಳುವಶಕ್ತಿಯು ಕ್ಷೀಣಿಸುತ್ತಿದ್ದು ಬೆಲೆಏರಿಕೆಯ ವಿರುದ್ಧ ಐಕ್ಯಹೋರಾಟ ನಡೆಸುವ ಹೊಣೆಗಾರಿಕೆ ಇಂದು ನಮ್ಮ ದೇಶದ ಸಂಘಟಿತ ಕಾರ್ಮಿಕ ಚಳುವಳಿಯ ಮೇಲಿದೆ ಎಂದು ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ನಂಜುಂಡಪ್ಪನವರು 30-8-80 ರಂದು ಮೈಸೂರಿನಲ್ಲಿ ಸಿಂಡಿಕೇಟ್ ಬ್ಯಾಂಕ್ ಸ್ಟಾಫ್ ಯೂನಿಯನ್ನಿನ ದ್ವಿತೀಯ ಕರ್ನಾಟಕ ರಾಜ್ಯ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಭಾಷಣ ಮಾಡುತ್ತಾ ತಿಳಿಸಿದರು.

ಸಂಬಳ ಹೆಚ್ಚಳ, ತುಟ್ಟಿಭತ್ತೆ ಹೆಚ್ಚಳ ಮುಂತಾದುವುಗಳಿಂದ ಹಣದ ಚಲಾವಣೆ ಹೆಚ್ಚಾಗಿ ಬೆಲೆಏರಿಕೆಯುಂಟಾಗುತ್ತದೆ ಎಂಬ ಆಳುವ ವರ್ಗಗಳ ಸೇವಕರಾಗಿರುವ ಪಂಡಿತರ, ಬಲಪಂಥೀಯರ ವಾದವನ್ನು ಖಂಡತುಂಡವಾಗಿ ತಿರಸ್ಕರಿಸಿದ ಅವರು ಕೇಂದ್ರಸರ್ಕಾರವು ಅನುಸರಿಸುವ ಆರ್ಥಿಕನೀತಿ-ಕರಾಕರಣೆ, ಡೆಫಿಸಿಟ್ ಫಿನಾನ್ಸಿಂಗ್, ಕಾಳಸಂತೆ, ಅಕ್ರಮ ದಾಸ್ತಾನು, ಲಾಭಬಡುಕತನ ಬೆಲೆಏರಿಕೆಯ ಮುಖ್ಯ ಕಾರಣಗಳು ಎಂದು ಹೇಳಿ ಈ ಕಾರಣಗಳನ್ನು ಜನತೆಗೆ ವಿವರಿಸಿ ಹೇಳುವ ಕೆಲಸವನ್ನು ಇಂದು ಕಾರ್ಮಿಕ ಸಂಘಗಳು ಮಾಡಬೇಕಾಗಿದೆ ಎಂದರು.

1947ರಿಂದ ಈ ವರೆವಿಗೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಮತ್ತು ಇರುವ ರಾಜಕೀಯ ಪಕ್ಷಗಳು, ಬಂಡವಾಳಶಾಹಿ ವ್ಯವಸ್ಥೆಯು ಜಾಗತಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ಈ ಕಾಲಾವಧಿಯಲ್ಲಿ-ನಮ್ಮ ದೇಶದಲ್ಲಿ ಬಂಡವಾಳಶಾಹಿ ಪದ್ಧತಿಯನ್ನು ಬೆಳೆಸುವ ಆರ್ಥಿಕನೀತಿಯನ್ನು ಅನುಸರಿಸಿಕೊಂಡು ಬಂದುದರಿಂದ ಆರ್ಥಿಕ ಬಿಕ್ಕಟ್ಟು ಆಳವಾಗಿ ಶ್ರೀಸಾಮಾನ್ಯರು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳು ಉದ್ಭವಿಸಿ ಬೆಳೆಯುತ್ತಿವೆ. ಏಕಸ್ವಾಮ್ಯಸ್ಥ ಬಂಡವಾಳಗಾರರ ಆಸ್ತಿ 6000 ಕೋಟಿ ರೂಪಾಯಿಗಿಂತಲೂ ಹೆಚ್ಚಾಗಿ ಅವರಲ್ಲಿ ಬಿರ್ಲಾ ಮತ್ತು ಟಾಟಾ-ಈ ಎರಡು ಕುಟುಂಬಗಳ ಆಸ್ತಿಯೇ ರೂ 2500 ಕೋಟಿಯಾಗಿದ್ದರೆ, ಬಡತನದ ರೇಖೆಯ ಕೆಳಗಿರುವವರ ಸಂಖ್ಯೆ 40 ಕೋಟಿಯನ್ನು ಮೀರಿದೆ.

ಪೆಟ್ರೋಲಿಯಂ ಉತ್ಪನ್ನಗಳ ರಾಸಾಯನಿಕ ಗೊಬ್ಬರಗಳ ಬೆಲೆಗಳನ್ನು ತೀವ್ರವಾಗಿ ಏರಿಸಿ ರೈಲು ದರಗಳನ್ನು ಹೆಚ್ಚಿಸಿದ ನಂತರ ಶ್ರೀ ಆರ್. ವೆಂಕಟರಾಮನ್ ಲೋಕಸಭೆಯಲ್ಲಿ ಮಂಡಿಸಿದ ಮುಂಗಡಪತ್ರದಲ್ಲಿ ಇನ್ನೂ ಅಪ್ರತ್ಯಕ್ಷ ತೆರಿಗೆಗಳನ್ನು ಹೇರಿ ಸುಮಾರು ರೂ 2600 ಕೋಟಿ ಖೋತಾ ತೋರಿಸಿದ್ದಾರೆ. ಈ ಮೊತ್ತದ ನೋಟುಗಳು ಅಚ್ಚಾಗಿ ಚಲಾವಣೆಗೆ ಬಂದಾಗ ಮತ್ತೂ ಬೆಲೆ ಏರಿಕೆಯಾಗಿ ದುಡಿಯುವ ಜನರ ಸುಲಿಗೆಯಾಗಿ ಏಕಸ್ವಾಮ್ಯಸ್ಥ ಬಂಡವಾಳಗಾರರ ಆಸ್ತಿ ಮತ್ತೂ ಹೆಚ್ಚುತ್ತದೆ.

ಈ ಹೊಸ ಹೊರೆಗಳ ವಿರುದ್ಧ ವಿಶಾಲವಾದ ಐಕ್ಯಹೋರಾಟವನ್ನು ಸಂಘಟಿಸಬೇಕಾದ ಕಾಲ ಸನ್ನಿಹಿತವಾಗಿದೆ. ಪ್ರಜಾಪ್ರಭುತ್ವ ಚಳುವಳಿ ಹಿಂದುಳಿದಿರುವ ಕರ್ನಾಟಕದಲ್ಲೂ ಸಹ ಮಲಪ್ರಭಾ ರೈತರು ಎಚ್ಚೆತ್ತಿರುವುದು, ಆಗಸ್ಟ್ 18ರಂದು ಕರ್ನಾಟಕದಲ್ಲಿ ಯಶಸ್ವಿಯಾದ ಸಾರ್ವತ್ರಿಕ ಮುಷ್ಕರ ನಡೆದಿರುವುದು ಅತ್ಯಂತ ಶುಭ ಸೂಚನೆಗಳಾಗಿವೆ ಎಂದು ಅವರು ಹೇಳಿದರು.

ಪ್ರಜಾಪ್ರಭುತ್ವ ಚಳುವಳಿಯ ಮೇಲೆ ಆಳುವವರ್ಗಗಳ ಸರ್ಕಾರದ ದಾಳಿ ನಡೆಯುವಾಗ ಮೊದಲ ಪ್ರಹಾರವಾಗುವುದು ಸಂಘಟಿತ ಕಾರ್ಮಿಕ ಚಳುವಳಿಯ ಮೇಲೆ, ಅದರಲ್ಲೂ ಬ್ಯಾಂಕ್, ವಿಮೆ ಮತ್ತು ಸರ್ಕಾರಿ ಕ್ಷೇತ್ರದ ಕಾರ್ಮಿಕರ ಮೇಲೆ. ಹೀಗಿರುವಾಗ ಸಂಘಟಿತ ಕಾರ್ಮಿಕ ಚಳುವಳಿಯ ಅವಿಭಾಜ್ಯ ಭಾಗವಾಗಿ ಉಳಿಯಬೇಕಾದ ಬ್ಯಾಂಕ್ ನೌಕರರು ಅವರ ಮುಖಂಡತ್ವದ ತಪ್ಪು ಧೋರಣೆಯಿಂದಾಗಿ ಕಾರ್ಮಿಕ ಚಳುವಳಿಯ ಪ್ರಮುಖ ವಾಹಿನಿಯಿಂದ ಬೇರ್ಪಟ್ಟು ದೂರ ಉಳಿದಿದ್ದಾರೆ.

ಐಕ್ಯಹೋರಾಟಗಳ ಬಗ್ಗೆ ಬ್ಯಾಂಕ್ ನೌಕರರ ಮುಖಂಡತ್ವದ ತಪ್ಪುಗಳ ಬಗ್ಗೆ ನಿದರ್ಶನಗಳನ್ನು ಕೊಡುತ್ತಾ 1979ರ ಜುಲೈ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಸಮಾವೇಶದಲ್ಲಿ ಭಾಗವಹಿಸಿ ಸಮಾವೇಶವು ತೆಗೆದುಕೊಂಡ ನಿರ್ಣಯಗಳಿಗೆ ಬಾಗಿಗಳಾದ ಬ್ಯಾಂಕ್ ನೌಕರರ ಸಂಘಗಳ ಮುಖಂಡರು ಸೆಪ್ಟೆಂಬರ್ 14ರಂದು ನಡೆದ ಅಖಿಲ ಭಾರತ ಮುಷ್ಕರದಲ್ಲಿ ಭಾಗವಹಿಸಲು ಬ್ಯಾಂಕ್ ನೌಕರರಿಗೆ ಕರೆ ಕೊಡಲಿಲ್ಲ, ಕಳೆದ ಜುಲೈ 14ರಂದು ಬೆಂಗಳೂರಿನಲ್ಲಿ "ಕಾರ್ಮಿಕ ಹಕ್ಕುಗಳ ಜಂಟಿ ಕ್ರಿಯಾ ಸಮಿತಿಯು ನಡೆಸಿದ ಅಗತ್ಯಸೇವಾ ನಿರ್ವಹಣೆಯ ಮಸೂದೆಯು ಕಾರ್ಮಿಕ ಸಂಘಗಳ ರಾಜ್ಯಮಟ್ಟದ ಸಮಾವೇಶದಲ್ಲಿ ಬ್ಯಾಂಕ್ ನೌಕರರ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದರು. ಸಮಾವೇಶವು ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂದು ರಾಜ್ಯಸರ್ಕಾರವನ್ನು ಒತ್ತಾಯಪಡಿಸಲು ಆಗಸ್ಟ್ 18ರಂದು ರಾಜ್ಯಾದ್ಯಂತ ಸಾರ್ವತ್ರಿಕ ಮುಷ್ಕರ ನಡೆಸಲು ರಾಜ್ಯದ ಕಾರ್ಮಿಕವರ್ಗಕ್ಕೆ ಕರೆಕೊಟ್ಟಿತು. ಆದರೆ ಬ್ಯಾಂಕ್ ನೌಕರರ ಮುಖಂಡತ್ವ ಈ ಸಾರ್ವತ್ರಿಕ ಮುಷ್ಕರವನ್ನು ನಡೆಸಬೇಕೆಂದು ರಾಜ್ಯದಲ್ಲಿರುವ ಬ್ಯಾಂಕ್ ನೌಕರರಿಗೆ ಕರೆ ಕೊಡಲಿಲ್ಲ ಎಂದು ಕಾಂ ನಂಜುಂಡಪ್ಪನವರು ಹೇಳಿದರು.

ಇಂದು ಸಂಘಟಿತ ಕಾರ್ಮಿಕ ಚಳುವಳಿ ಕಾರ್ಮಿಕರ ಸಂಬಳ, ಬೋನಸ್ ಮುಂತಾದ ಬೇಡಿಕೆಗಳಿಗಾಗಿ ಚಳುವಳಿ ನಡೆಸಿದರೆ ಸಾಲದು, ಜನತೆಯ ಬೇಡಿಕೆಗಳಿಗಾಗಿಯೂ ಚಳುವಳಿ ನಡೆಸಬೇಕು, ಜನತಾ ಪ್ರಜಾಪ್ರಭುತ್ವ ಚಳುವಳಿಯ ನಾಯಕತ್ವವನ್ನು ಸಂಘಟಿತ ಕಾರ್ಮಿಕ ಚಳುವಳಿ ವಹಿಸಬೇಕು.

ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕಾಗಿ, ಉದ್ಯೋಗ ಕೊಡುವ ತನಕ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ತೆಯನ್ನು ಕೊಡಬೇಕು, ಕೃಷಿಕೂಲಿಗಾರರಿಗೆ ಈಗಿರುವ ಕನಿಷ್ಠ ಕೂಲಿಯನ್ನು ಮೂರುಪಟ್ಟು ಹೆಚ್ಚಿಸಬೇಕು, ರೈತರು ಬೆಳೆದ ಬೆಳೆಗೆ ನ್ಯಾಯವಾದ ಬೆಲೆ ಸಿಕ್ಕಬೇಕು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಿ ಬಲಪಡಿಸಿ ದಿನಬಳಕೆಯ ವಸ್ತುಗಳನ್ನು ನಿಗದಿಯಾದ ಕಡಿಮೆ ಬೆಲೆಗಳಿಗೆ ಒದಗಿಸಬೇಕು, ಎಲ್ಲರಿಗೂ ಪ್ರಜಾಪ್ರಭುತ್ವ ಹಕ್ಕುಗಳು ನಾಗರೀಕ ಸ್ವಾತಂತ್ರ್ಯ ವಿರಬೇಕು ಮೊದಲಾದ ಬೇಡಿಕೆಗಳಿಗಾಗಿ ಸಂಘಟಿತ ಕಾರ್ಮಿಕ ಚಳುವಳಿ ಹೋರಾಟ ನಡೆಸಬೇಕಾಗಿದೆ. ಇಂತಹ ಬೇಡಿಕೆಗಳಿಗಾಗಿ ನಡೆಯುವ ಐಕ್ಯ ಚಳುವಳಿಯಲ್ಲಿ ಬ್ಯಾಂಕ್ ನೌಕರರು ಭಾಗವಹಿಸದಿದ್ದರೆ ಚರಿತ್ರೆ ಅವರನ್ನು ಕ್ಷಮಿಸದು.

ದುಡಿಯುವ ಜನತೆಯ ಒಗ್ಗಟ್ಟನ್ನು ಒಡೆಯುವ ಹಳ್ಳಿಯ ಬಡವರನ್ನು ಪೇಟೆಯ ಸಂಘಟಿತ ಕಾರ್ಮಿಕರ ಮೇಲೆ ಎತ್ತಿಕಟ್ಟುವ ಆಳುವವರ್ಗಗಳ ಪ್ರಯತ್ನವನ್ನು ಸೋಲಿಸಬೇಕು.

ಆದಾಯಗಳಲ್ಲಿರುವ ತಾರತಮ್ಯವನ್ನು ಹೋಗಲಾಡಿಸುವ ವಿಚಾರ ಮಾಡುವಾಗ ಕೃಷಿಕೂಲಿಗಾರರ ವೇತನವನ್ನು ಬ್ಯಾಂಕ್ ನೌಕರರ ಸಂಬಳಕ್ಕೆ ಹೋಲಿಸುವುದಕ್ಕೆ ಬದಲಾಗಿ ಕೃಷಿಕೂಲಿಗಾರರ, ರೈತರ, ಕಾರ್ಮಿಕರ, ಮಧ್ಯಮವರ್ಗ-ಈ ವರ್ಗಗಳ ವರಮಾನವನ್ನು ಏಕಸ್ವಾಮ್ಯಸ್ಥ ಬಂಡವಾಳಗಾರರ, ದೊಡ್ಡ ಜಮೀನ್ದಾರರ, ಸಟ್ಟಾವ್ಯಾಪಾರಿಗಳ, ಬಂಡವಾಳಗಾರರ ವರಮಾನಕ್ಕೆ ಹೋಲಿಸಿ ಈ ವ್ಯತ್ಯಾಸವನ್ನು ಹೋಗಲಾಡಿಸಬೇಕು ಎಂಬ ಬೇಡಿಕೆಗಾಗಿ ಹೋರಾಟ ನಡೆಸಬೇಕು.

ಬ್ಯಾಂಕ್ ನೌಕರರ ಮುಖಂಡತ್ವ ಇನ್ನಾದರೂ ಬ್ಯಾಂಕ್ ನೌಕರರ ಚಳುವಳಿಗೆ ಹೊಸ ತಿರುವುಕೊಟ್ಟು ಅವರು ಸಂಘಟಿತ ಕಾರ್ಮಿಕ ಚಳುವಳಿಯ ಅವಿಭಾಜ್ಯ ಅಂಗ ಎಂಬ ತಿಳುವಳಿಕೆ ಕೊಟ್ಟು ಐಕ್ಯಹೋರಾಟಗಳಲ್ಲಿ ಇಳಿಸಬೇಕು. ಈ ದಿಸೆಯಲ್ಲಿ ಬ್ಯಾಂಕ್ ನೌಕರರು ವಿಚಾರಮಾಡುವುದು ಬಹಳ ಅಗತ್ಯವಿದೆ. ಈ ದಿಸೆಯಲ್ಲಿ ಚಳುವಳಿಯನ್ನು ಮುನ್ನಡೆಸಬೇಕು ಎಂದು ಕಾಂ ಸಿ ನಂಜುಂಡಪ್ಪನವರು ಬ್ಯಾಂಕ್ ನೌಕರರಿಗೆ ಕರೆಕೊಟ್ಟರು.

○

ಗ್ರಾಂಡ್ ನ್ಯಾಷನಲ್ ಹೋಟೆಲ್ ಕಾರ್ಮಿಕರ ಹೋರಾಟ 100ನೇ ದಿವಸಕ್ಕೆ

ತಾ. 30-8-1980ಕ್ಕೆ ಗ್ರಾಂಡ್ ನ್ಯಾಷನಲ್ ಹೋಟೆಲ್ ಕಾರ್ಮಿಕರು ಮುಷ್ಕರದ 100ನೇ ದಿವಸವನ್ನು ಆಚರಿಸಿದರು, ಹೋರಾಟ ಮಾಡುತ್ತಿರುವ 24 ಕಾರ್ಮಿಕರನ್ನು ವಂದಿಸಲು ನಗರದ ನಾನಾ ಹೋಟೆಲ್‌ಗಳಿಂದ ಒಬ್ಬೊಬ್ಬ ಪ್ರತಿನಿಧಿ ಬಂದಿದ್ದರು. ಸಂಜೆ 6-30ಕ್ಕೆ ನರಸಿಂಹರಾಜ ರೋಡಿನಲ್ಲಿರುವ ಹೋಟೆಲ್ ಮುಂದೆ ಎಲ್ಲರೂ ಸಭೆಸೇರಿದರು. ಕಾಂ. ಎ. ಜೆ. ಕೆ. ನಾಯರ್, ಕಾಂ. ಅಡವೀಶ್, ಕಾಂ. ರಾಜನ್ ಮಾತನಾಡಿದರು. ಕಾಂ. ನಾಯರ್‌ರವರು ಹೋರಾಟವನ್ನು 200 ದಿವಸಗಳಿಗೆ ತಲುಪಿದರೂ ನ್ಯಾಯಸಮ್ಮತವಾದ ತೀರ್ಮಾನವಾಗುವವರೆಗೂ ಹೋರಾಟವನ್ನು ಮುಂದುವರಿಸುವಂತೆ ಹೇಳಿದರು. ಹೋಟೆಲ್ ಮಾಲೀಕರು ಮಾತುಕತೆಯಿಂದ ವಿವಾದ ಬಗೆಹರಿಸಲು ಪ್ರಥಮ ಬಾರಿಗೆ ಬಂದಿರುವುದನ್ನು ಸ್ವಾಗತಿಸಿ, ಕಾರ್ಮಿಕರೆಲ್ಲರ ಹಿತ ಕಾಪಾಡುವ ರೀತಿ ಮಾತುಕತೆ ಮಾಡಿ ತೀರ್ಮಾನ ಮಾಡುವ ಭರವಸೆ ಕೊಟ್ಟರು. ಕಾಂ. ಅಂತೋಣಿ ವಂದನಾರ್ಪಣೆ ಮಾಡಿದರು.

ಬಡರೈತರ ಬೇಡಿಕೆಗಳ ಈಡೇರಿಕೆಗೆ ಬೆಂಗಳೂರು ಜಿಲ್ಲಾಧಿಕಾರಿ ಮುಂದೆ ಧರಣಿ

ಬೆಂಗಳೂರು ಜಿಲ್ಲೆಯ ಗ್ರಾಮಗಳಲ್ಲಿನ ನಿವೇಶನ ರಹಿತ ಬೇಸಾಯ ಕೂಲಿಗಾರರಿಗೆ ಹರಿಜನ ಗಿರಿಜನರಿಗೆ ನಿವೇಶನಗಳನ್ನು ಕೊಡಬೇಕು. ಹೊಸಕೋಟೆ ತಾಲ್ಲೂಕು ನಾಗನಾಯಕನ ಕೋಟೆಯಲ್ಲಿ ಬಡರೈತರು, ಕೃಷಿ ಕೂಲಿಗಾರರು ಉಳುಮೆ ಮಾಡಿರುವ ಸರ್ಕಾರಿ ಭೂಮಿಯನ್ನು ಅವರಿಗೇ ಖಾಯಂ ಮಾಡಿಕೊಡಬೇಕು, ರೈತರ ಉತ್ಪನ್ನಗಳಿಗೆ ನ್ಯಾಯಬೆಲೆ ಕೊಡಬೇಕು, ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೋಡಿಸಿಕೊಡಬೇಕು ಎಂಬ ಬೇಡಿಕೆಗಳ ಈಡೇರಿಕೆಯನ್ನು ಒತ್ತಾಯಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೂ ಭಾರತ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಪ್ರಾಂತ ರೈತಸಂಘ ಹಾಗೂ ರಾಜ್ಯ ರೈತಸಂಘಗಳ ಬೆಂಗಳೂರು ಜಿಲ್ಲಾ ಸಮಿತಿಗಳ ಸಂಯುಕ್ತ ಆಶ್ರಯದಲ್ಲಿ ಸೆ. 1ರಂದು ಧರಣಿ ಸತ್ಯಾಗ್ರಹ ಆಚರಿಸಲಾಯಿತು.

ಬೆಂಗಳೂರು ನಗರದ ರೈಲು ನಿಲ್ದಾಣದಿಂದ ಬೆಂಗಳೂರು ಬಸ್ ನಿಲ್ದಾಣ, ಗಾಂಧಿನಗರ, ಮೈಸೂರು ಬ್ಯಾಂಕ್ ಚೌಕದ ಮಾರ್ಗವಾಗಿ ಜಿಲ್ಲಾಧಿಕಾರಿಗಳ ಕಚೇರಿಗೆ ಮೆರವಣಿಗೆಯಲ್ಲಿ ಬಂದ ರೈತ ಕೂಲಿಗಾರರು ತಮ್ಮ ಬೇಡಿಕೆಗಳ ಬೆಂಬಲಾರ್ಥ ಘೋಷಣೆಗಳನ್ನು ಕೂಗುತ್ತಿದ್ದರು. ಉತ್ತರ ಕರ್ನಾಟಕದ ರೈತರ ಮೇಲೆ ರಾಜ್ಯಸರ್ಕಾರವು ನಡೆಸಿದ ಗೋಲೀಬಾರನ್ನು ಮೆರವಣಿಗೆಕಾರರು ಖಂಡಿಸುತ್ತಿದ್ದರು. ರೈತರ ಎಲ್ಲಾ ಸಾಲಗಳನ್ನು ರದ್ದು ಮಾಡಿ, ಹೊಸ ಸಾಲವನ್ನು ರಿಯಾಯಿತಿ ಬಡ್ಡಿದರದಲ್ಲಿ ಒದಗಿಸಬೇಕೆಂದು ಸರ್ಕಾರವನ್ನು ಆಗ್ರಹಪಡಿಸಿದರು.

ಸೆ. 1ರ ಬೆಳಿಗ್ಗೆ ಹತ್ತುವರೆಯಿಂದ ಸಂಜೆ 5 ಗಂಟೆಯವರೆಗೆ ನಡೆದ ಧರಣಿ ಸತ್ಯಾಗ್ರಹದಲ್ಲಿ ಹೆಂಗಸರು ಮಕ್ಕಳೂ ಪಾಲ್ಗೊಂಡಿದ್ದರು. ಸುಮಾರು 300 ಜನ ರೈತಕೂಲಿಗಾರರನ್ನು ಉದ್ದೇಶಿಸಿ ಪ್ರಾಂತ ರೈತಸಂಘದ ಖಜಾಂಚಿ ಕಾಂ. ಪಿ. ಜಗನ್ನಾಥ್, ಹೊಸಕೋಟೆ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಆರ್. ಆರ್. ಮನೋಹರ್ ಹಾಗೂ ಬೆಂಗಳೂರು ಜಿಲ್ಲಾ ರೈತಸಂಘದ ನಾಯಕ ಕಾಂ. ವೆಂಕಟೇಶ್ ಅವರು ಮಾತನಾಡಿ ಧರಣಿ ಸತ್ಯಾಗ್ರಹ ಮಾಡಿದ ರೈತ ಕೂಲಿಗಾರರನ್ನು ಅಭಿನಂದಿಸಿದರು. ದಟ್ಟ ದಾರಿದ್ರ್ಯದಿಂದ ಉತ್ತಮ ಜೀವನಕ್ಕಾಗಿ ಸಂಘಟಿತರಾಗಿ ಹೋರಾಡದೆ ಅನ್ಯಮಾರ್ಗವಿಲ್ಲ ಎಂದು ಎಲ್ಲ ಭಾಷಣಕಾರರೂ ಹೇಳಿ ರೈತಸಂಘವನ್ನು ಜಿಲ್ಲೆಯಲ್ಲಿ ಬಲಿಷ್ಠ ಸಂಘಟನೆಯಾಗಿ ಕಟ್ಟಬೇಕೆಂದರು.

ಜಿಲ್ಲಾಧಿಕಾರಿಗಳು ರೈತರ ನಿಯೋಗವನ್ನು ಬರಮಾಡಿಕೊಂಡು ಮನವಿ ಸ್ವೀಕರಿಸಿ ರೈತರ ಎಲ್ಲಾ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಆಶ್ವಾಸನೆ ಕೊಟ್ಟರು. ನಿವೇಶನ, ಸರ್ಕಾರಿ ಭೂಮಿ ಖಾಯಂ ಮಾಡಿಕೊಡುವುದನ್ನು ಇನ್ನು ಒಂದು ವಾರದೊಳಗೆ ಈಡೇರಿಸುವುದಾಗಿ ಹೇಳಿದರೆಂದು ನಾಯಕರುಗಳು ರೈತ ಕೂಲಿಗಾರರಿಗೆ ತಿಳಿಸಿದರು.

ನಿಯೋಗದ ನಾಯಕತ್ವವನ್ನು ಬೆಂಗಳೂರು ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಪಿ. ಜಗನ್ನಾಥ್, ಹೊಸಕೋಟೆ ತಾ. ರೈತಸಂಘದ ಕಾರ್ಯದರ್ಶಿ ಆರ್. ಆರ್. ಮನೋಹರ್ ಹಾಗೂ ಜಿಲ್ಲಾ ರೈತಸಂಘದ (ಸಿ. ಪಿ. ಐ.) ಕಾರ್ಯದರ್ಶಿ ಕಾಂ. ವೆಂಕಟೇಶ್ ವಹಿಸಿದ್ದರು.

●

ಯಶಸ್ವಿ ಸಾರ್ವತ್ರಿಕ ಮುಷ್ಕರ

ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯು, ಅಗತ್ಯ ಸೇವಾ ಮಸೂದೆ, ಪೋಲೀಸ್ ಮಧ್ಯಪ್ರವೇಶ ಇವುಗಳನ್ನು ವಿರೋಧಿಸಿ 18-8-80ರಂದು ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಟ್ಟಿದ್ದವು. ರಾಜ್ಯದ ಎಲ್ಲೆಡೆ ಮುಷ್ಕರ ಚಾರಿತ್ರಿಕವೆನಿಸುವಷ್ಟು ಯಶಸ್ವಿಗೊಂಡಿತು. ತಡವಾಗಿ ನಮಗೆ ವರದಿಗಳು ಇನ್ನೂ ಬರುತ್ತಿವೆ.

ಮೈಸೂರು :

ಮುಷ್ಕರವನ್ನು ನಡೆಸಲು ಸಿ.ಐ.ಟಿ.ಯು.ನ ಎಂ.ಎನ್. ಉಗ್ರಪ್ಪ ಮತ್ತು ಎ.ಐ.ಟಿ.ಯು.ಸಿ ನ ವೆಂಕಟರಾವ್ ಅವರ ಸಂಚಾಲಕತ್ವದಲ್ಲಿ ಸಮಿತಿ ರಚಿತವಾಗಿತ್ತು. ರೈಲ್ವೆ, ವಿಮೆ, ಬ್ಯಾಂಕ್‌ನೌಕರರ ಪ್ರತಿನಿಧಿಗಳು ಈ ಕ್ರಿಯಾಸಮಿತಿಯಲ್ಲಿ ಇದ್ದರು. ರೈಲ್ವೆ ವರ್ಕ್‌ಶಾಪ್, ಐಡಿಯಲ್ ಜಾವಾ, ಸಾರಿಗೆ ಸಂಸ್ಥೆ, ಬೀಡಿ, ಹೋಟೆಲ್ ಕೆಲಸಗಾರರ ವಿವಿಧ ಸಭೆಗಳು ನಗರದಲ್ಲಿ ನಡೆದವು. ಇಡೀ ಮೈಸೂರು ಬಂದ್ ಆಗಿತ್ತು. ಸಂಜೆ ಪುರಭವನದ ಮೈದಾನದಲ್ಲಿ ಭಾರಿ ಸಭೆ ನಡೆಯಿತು. ಅನೇಕ ಯುವಕ ಮುಂದಾಳುಗಳು ಭಾಷಣ ಮಾಡಿದರು. ಮುಷ್ಕರದ ಪೂರ್ಣ ಯಶಸ್ಸಿನ ಬಗ್ಗೆ ಮೈಸೂರಿನ ಸ್ಥಳೀಯ ಪತ್ರಿಕೆಗಳು ವಿವರವಾದ ಪ್ರಚಾರ ಕೊಟ್ಟವು.

ಭದ್ರಾವತಿ :

ಅಗತ್ಯ ಸೇವಾ ಮಸೂದೆಯನ್ನು ವಿರೋಧಿಸುವ ಸಭೆ ಭದ್ರಾವತಿಯಲ್ಲಿ ನಡೆಯಿತು. ಹಮಾಲಿ ಕಾರ್ಮಿಕರ, ಲೋಕೋಪಯೋಗಿ ಉದ್ಯೋಗಿಗಳ ಬ್ಯಾಂಕ್ ನೌಕರರ, ರಸ್ತೆ ಸಾರಿಗೆ, ಪೌರ ಕಾರ್ಮಿಕರ, ರಿಕ್ಷಾ ಚಾಲಕರ ಸಂಘಗಳು ಮುಷ್ಕರದಲ್ಲಿ ಭಾಗವಹಿಸಿದ್ದವು.

ಸುಳ್ಯ :

ದ. ಕ. ಜಿಲ್ಲಾ ಸುಳ್ಯ ತಾಲ್ಲೂಕಿನ ಕೇಂದ್ರವಾದ ಸುಳ್ಯದಲ್ಲಿ 18-8-80 ರಂದು ಸಂಪೂರ್ಣ ಬಂದ್ ಆಚರಿಸಲಾಯಿತು. ಸೆಕ್ಷನ್ 144 ಜಾರಿಯಲ್ಲಿದ್ದರೂ ಸಿ.ಐ.ಟಿ.ಯು., ಬಿ.ಎಂ.ಎಸ್.ಗಳ ಕಾರ್ಮಿಕರ ದೊಡ್ಡ ಮೆರವಣಿಗೆ ಪೇಟೆಯ ಮುಖ್ಯ ಬೀದಿಗಳಲ್ಲಿ ನಡೆಯಿತು.

ತುಮಕೂರು :

ಜಿಲ್ಲೆಯ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಬೃಹತ್ ಮೆರವಣಿಗೆ ನಡೆದು ಜಿಲ್ಲಾ ಕಚೇರಿ ಆವರಣದಲ್ಲಿ ಬೃಹತ್ ಬಹಿರಂಗ ಸಭೆ ನಡೆಯಿತು. ಎಲ್ಲ ಟ್ರೇಡ್‌ಯೂನಿಯನ್‌ಗಳ ಕಾರ್ಮಿಕರು ಇದರಲ್ಲಿ ಭಾಗವಹಿಸಿದ್ದರು. ಪ್ರದರ್ಶನದ ನೇತೃತ್ವವನ್ನು ಕೆ. ಆರ್. ನಾಯಕ್. ಟಿ ಎಲ್. ತಿಮ್ಮಪ್ಪ, ಹೆಚ್. ಸಿ. ಚನ್ನಪ್ಪ, ಮಹಮದ್ ದಸ್ತಗೀರ್, ಬಡೇ ಸಾಹೇಬ್, ಅಂಜಪ್ಪ, ಮದಾರ್ ಸಾಬ್ (ಸಿ.ಐ.ಟಿ.ಯು.) ರಾಜಾಚಾರ್, ಸಿದ್ದಲಿಂಗಯ್ಯ, ಅಬ್ದುಲ್ ಸುಭಾನ್, ಡಾ. ಚೆರಿಯನ್, ಶಿವಣ್ಣ, ಶಿವನಂಜಪ್ಪ, ಟಿ. ಆರ್. ರೇವಣ್ಣ (ಎ.ಐ.ಟಿ.ಯು.ಸಿ.) ವಹಿಸಿದ್ದರು.

ಪಾವಗಡದಲ್ಲಿ ನಿಧಿ ಸಂಗ್ರಹ

ಇದೇ ಆಗಸ್ಟ್ ತಿಂಗಳಿನಲ್ಲಿ ದೊಡ್ಡಬಳ್ಳಾಪುರದಲ್ಲಿ ನಡೆದ ಪ್ರಾಂತ ರೈತ ಸಂಘದ ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ಜಾರಿಗೆ ತರಲು ರೈತಸಂಘದ ಪಾವಗಡ ತಾಲ್ಲೂಕು ಸಮಿತಿಯು ನಿರ್ಧರಿಸಿದೆ.

ಅದರಂತೆ, ಇತ್ತೀಚೆಗೆ ಉತ್ತರ ಕನ್ನಡದಲ್ಲಿ ನಡೆದ ರೈತ ಚಳುವಳಿಯಲ್ಲಿ ಪೋಲೀಸ್ ದೌರ್ಜನ್ಯದಿಂದ ಸತ್ತವರ ಕುಟುಂಬಗಳಿಗೆ ಪರಿಹಾರ ನಿಧಿಗಾಗಿ ಪ್ರಾಂತ ರೈತಸಂಘವು ಬಿಡುಗಡೆ ಮಾಡಿರುವ ಕೂಪನ್‌ಗಳನ್ನು ಮಾರಿ ಬಂದ 150 ರೂಪಾಯಿಗಳನ್ನು ಜಿಲ್ಲಾ ಕಾರ್ಯದರ್ಶಿಗಳಿಗೆ ಕಳುಹಿಸಲಾಗಿದೆ. ಕೂಪನ್ ಮಾರಾಟದ ಕಾರ್ಯಕ್ರಮದಲ್ಲಿ ಪಕ್ಷದ ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾಂ. ಆರ್. ಶಂಕರನಾರಾಯಣರಾವ್ ಮತ್ತು ರೈತಸಂಘದ ಸದಸ್ಯ ಕಾಂ. ಎ. ಅಂಜನೇಯುಲು ಅವರು ಭಾಗವಹಿಸಿದ್ದರು.

●

ಕೋಣಿಗ್ರಾಮದಲ್ಲಿ ವಿಚಾರಗೋಷ್ಠಿ

ದ. ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಣಿ ಗ್ರಾಮದಲ್ಲಿ ಆಗಸ್ಟ್ 15ರಂದು ನಡೆದ ವಿಚಾರಗೋಷ್ಠಿಯಲ್ಲಿ ಭಾರತ ದೇಶದ ಇಡೀ ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಯ ಬಗ್ಗೆ ಗಂಭೀರ ವಿಮರ್ಶೆ ನಡೆಯಿತು. ಕುಂದಾಪುರ ತಾಲ್ಲೂಕು ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಮತ್ತು ಭಾರತ ವಿದ್ಯಾರ್ಥಿ ಫೆಡರೇಶನ್ ಜಂಟಿಯಾಗಿ ನಡೆಸಿದ ಈ ಕಾರ್ಯಕ್ರಮದಲ್ಲಿ ಯುವಕ, ಯುವತಿಯರು ಕಿಕ್ಕಿರಿದು ಸೇರಿದ್ದರು. ಶ್ರೀ ಕೋಟ ರಾಮಚಂದ್ರ ಉಡುಪರು ಅಧ್ಯಕ್ಷತೆ ವಹಿಸಿದ್ದರು.

ಇಂದು ದೇಶದ ಉದ್ದಗಲಕ್ಕೂ ಕೋಟ್ಯಾಂತರ ಪೇಲವ ಮುಖದ ನಿರುದ್ಯೋಗಿಗಳನ್ನು ಕಾಣಬಹುದು. ಇವರೆಲ್ಲರೂ ಬಂಡವಾಳಶಾಹಿ ವ್ಯವಸ್ಥೆ ಹುಟ್ಟುಹಾಕಿದ ಸಾಮಾಜ ವ್ಯವಸ್ಥೆಯ ಬಲಿ ಪಶುಗಳು. ಸಂಘಟಿತರಾಗಿ ತಮ್ಮ ಮೂಲಭೂತ ಹಕ್ಕಿಗಾಗಿ ಹೋರಾಡುವುದರೊಂದಿಗೆ ಇಡೀ ಸಮಾಜ ವ್ಯವಸ್ಥೆಯ ಬದಲಾವಣೆಯ ಬಗ್ಗೆ ಚಿಂತಿಸುವುದೊಂದೇ ನಿರುದ್ಯೋಗಿಗಳಿಗೆ ಉಳಿದಿರುವ ದಾರಿ ಎಂದು "ಯುವಜನತೆ ಮತ್ತು ನಿರುದ್ಯೋಗ" ಎಂಬ ವಿಷಯದ ಬಗ್ಗೆ ಪ್ರಬಂಧ ಮಂಡಿಸುತ್ತಾ ಸ್ವತಃ ನಿರುದ್ಯೋಗಿಯಾಗಿರುವ ಶ್ರೀ ಶಂಕರ್ ಖಾರ್ವಿಯವರು ಹೇಳಿದರು.

"ನಾವು ಮತ್ತು ನಮ್ಮ ಹಿರಿಯರು" ಎಂಬ ವಿಚಾರದ ಬಗ್ಗೆ ಪ್ರಬಂಧ ಮಂಡಿಸಿದ ಶ್ರೀ ಶಿವಾನಂದ ಕೋಡಿಯವರು, ಹಳೆ ಮೌಲ್ಯಗಳು, ಹಳೆ ಕಂದಾಚಾರಗಳು ನವ ಸಮಾಜ ನಿರ್ಮಾಣದತ್ತ ಚಿಂತಿಸುವಲ್ಲಿ ನಮಗೆ ಸವಾಲಾಗಿದೆ. ದೇವರು, ಧರ್ಮದ ಹೆಸರಿನಲ್ಲಿ, ಜಾತಿ-ಭಾಷೆಯ ಲೆಕ್ಕದಲ್ಲಿ ನಡೆಯುತ್ತಿರುವ ಶೋಷಣೆ, ಅಂಧಾನುಕರಣೆಯನ್ನು ನಾವು ಧಿಕ್ಕರಿಸುತ್ತೇವೆ. ಈ ನಿಟ್ಟಿನಲ್ಲಿ ಹಿರಿಯರ ಸಹಕಾರವನ್ನು ಯಾಚಿಸುತ್ತೇವೆ ಎಂದರು.

ಭಾರತದ ಇಂದಿನ ಸಮಾಜ ವ್ಯವಸ್ಥೆಯಲ್ಲಿ ಮಹಿಳೆ ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಿಸಲ್ಪಡುತ್ತಿದ್ದಾಳೆ. ಭ್ರಮಾತ್ಮಕ ಲೋಕದಲ್ಲಿ ಸುತ್ತುತ್ತಿರುವ ಮಹಿಳೆ ಜಾಗೃತಳಾಗಬೇಕು. ತನ್ನನ್ನು ಸರ್ವರೀತಿಯಿಂದ ಶೋಷಿಸುತ್ತಿರುವ ಸಮಾಜ ವ್ಯವಸ್ಥೆಗೆ ಸ್ತ್ರೀ ಧಿಕ್ಕಾರ ಹೇಳಬೇಕು. ಸಂಘಟಿತಳಾಗಿ ಹೋರಾಡಬೇಕು. ಪೂರ್ವಾಗ್ರಹ ಪೀಡಿತ ಬಂಡವಾಳಶಾಹಿತ್ವದ ಒಣ ಧೋರಣೆಗಳಿಂದ ಮುಕ್ತವಾದಾಗ ಮಾತ್ರ ಸ್ತ್ರೀ ಮಾನವೀಯ ವಿಚಾರಗಳನ್ನು ತನ್ನದಾಗಿಸಿಕೊಳ್ಳಲು ಸಾಧ್ಯ...ಎಂದು "ಭಾರತದಲ್ಲಿ ಮಹಿಳೆ" ಎಂಬ ವಿಚಾರದ ಬಗ್ಗೆ ಪ್ರಬಂಧ ಮಂಡಿಸಿದ ಕುಮಾರಿ ಯಶೋಧರ ಅಭಿಪ್ರಾಯಪಟ್ಟರು.

"ರೈತ, ಕೃಷಿಕೂಲಿಗಾರರ ನಡುವೆ ಯುವಜನ" ಎಂಬ ವಿಚಾರದ ಬಗ್ಗೆ ಪ್ರಬಂಧ ಮಂಡಿಸಿದ ಶ್ರೀ ಆನಂದ ಭಂಡಾರಿಯವರು ಇಂದಿನ ರೈತ, ಕೃಷಿ ಕೂಲಿಗಾರರು ಅನುಭವಿಸುತ್ತಿರುವ ಕಷ್ಟನಷ್ಟಗಳನ್ನು ವಿವರಿಸಿ, ಇವರುಗಳನ್ನು ಸಂಘಟಿಸಿ ಹೋರಾಟಕ್ಕೆ ಇಳಿಸುವ ನಿಟ್ಟಿನಲ್ಲಿ ಯುವಜನತೆ ಕಾರ್ಯತತ್ಪರರಾಗುವುದು ಅತ್ಯಗತ್ಯವೆಂದರು.

"ನಮ್ಮ ಸ್ವಾತಂತ್ರ್ಯೋತ್ಸವ" ಎಂಬ ವಿಚಾರದ ಬಗ್ಗೆ ಪ್ರಬಂಧ ಮಂಡಿಸಿ ಮಾತನಾಡಿದ ಶ್ರೀ ಕುಮಾರ್‌ರವರು ನಮ್ಮ ದೇಶ ಇಂದು ಆಚರಿಸುತ್ತಿರುವ ಸ್ವಾತಂತ್ರ್ಯೋತ್ಸವ ಶ್ರೀಮಂತರ ಮೋಜಿನ ಪೆಪ್ಪರಮಿಂಟ್ ದಿನಾಚರಣೆ ಎಂದು ವರ್ಣಿಸಿದರು. ಬಹುಪಾಲು ಜನತೆಯ ಕೋರಿಕೆ ಬೇಡಿಕೆಗಳನ್ನು ಈಡೇರಿಸದ ಸ್ವಾತಂತ್ರ್ಯಕ್ಕೆ ಅರ್ಥವೇನು ಎಂದು ಪ್ರಶ್ನಿಸಿದರು.

ವಿಚಾರಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದ ಶ್ರೀ ವಸಂತಬನ್ನಾಡಿಯವರು ಇದು ನಾವು ಜಾತಿವರ್ಗಗಳಿಂದ ಕೂಡಿದ ವಿಶಿಷ್ಟ ಸಮಾಜ ವ್ಯವಸ್ಥೆಯಲ್ಲಿ ಜೀವಿಸುತ್ತಿದ್ದೇವೆ. ಸಮಸ್ಯೆಗಳನ್ನಷ್ಟೇ ಸೃಷ್ಟಿಮಾಡುತ್ತಿರುವ ಸಮಾಜ ವ್ಯವಸ್ಥೆಯ ವಿರುದ್ಧ ಸಿಡಿದೇಳುವುದು ಯುವಜನತೆಯ ಕರ್ತವ್ಯ. ಈ ನಿಟ್ಟಿನಲಿ ಆರೋಗ್ಯಕರ ಸಾಮಾಜಿಕ ಪ್ರಜ್ಞೆಯನ್ನು ನಾವು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ವಿಚಾರಗೋಷ್ಠಿಯಲ್ಲಿ ಮಂಡಿಸಲಾದ ಪ್ರತಿಯೊಂದು ಪ್ರಬಂಧದ ಬಗ್ಗೆ ಚರ್ಚಿಸಲಾಯಿತು.

ಅಧ್ಯಕ್ಷಸ್ಥಾನದಿಂದ ಮಾತನಾಡಿದ ಶ್ರೀ ಕೋಟ ರಾಮಚಂದ್ರ ಉಡುಪರು, ಇಂದು ಭಾರತ ದೇಶ ಆಚರಿಸುತ್ತಿರುವ ಸ್ವಾತಂತ್ರ್ಯೋತ್ಸವಕ್ಕೆ ಯಾವ ಅರ್ಥವೂ ಉಳಿದಿಲ್ಲ. ಇಡೀ ದೇಶದ ಆರ್ಥಿಕ, ಸಾಮಾಜಿಕ ವ್ಯವಸ್ಥೆ ರೋಗಿಷ್ಠವಾಗಿದೆ. ಜನತೆಯ ಮೇಲೆ ನಿರಂತರ ಅನ್ಯಾಯ ದಬ್ಬಾಳಿಕೆ ನಡೆಯುತ್ತಿದೆ. ಇದಕ್ಕೆ ಉತ್ತರ ಜನರ ಸಂಘಟಿತ ಹೋರಾಟವೊಂದೆ. ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಯ ನಾಶದಿಂದ ಮಾತ್ರ ಸಮಸಮಾಜದ ರಚನೆ ಸಾಧ್ಯ ಎಂದು ಹೇಳಿದರು.

ವಿಚಾರಗೋಷ್ಠಿಯನ್ನು ನಡೆಸುವಲ್ಲಿ ಸರ್ವರೀತಿಯಿಂದ ನೆರವಾದವರು ಕೋಣಿ ಡಿ. ವೈ. ಎಫ್. ಸದಸ್ಯರು. ಕುಂದಾಪುರ ಸಮುದಾಯ ಸದಸ್ಯರು ವಿಚಾರಪೂರ್ಣ ಕವನಗಳನ್ನು ಹಾಡಿ ವಿಚಾರಗೋಷ್ಠಿಯನ್ನು ಅರ್ಥಪೂರ್ಣವಾಗಿಸಿದರು. ಆರಂಭದಲ್ಲಿ ಎಸ್. ಎಫ್. ಐ. ಕಾರ್ಯದರ್ಶಿ ಶ್ರೀ ಆರ್. ಜಯಕುಮಾರ್ ಸ್ವಾಗತಿಸಿದರು. ಕೊನೆಯಲ್ಲಿ ಡಿ. ವೈ. ಎಫ್. ಕಾರ್ಯದರ್ಶಿ ಮಹಾಬಲ ದೇವಾಡಿಗರು ಧನ್ಯವಾದವಿತ್ತರು.

○

ರಾಜ್ಯದಾದ್ಯಂತ ಧರಣಿ ಸತ್ಯಾಗ್ರಹ, ಮೆರವಣಿಗೆ

(1ನೇ ಪುಟದಿಂದ)

ಲಾಲ್‌ಬಾಗಿನಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಪೋಲೀಸ್ ದೌರ್ಜನ್ಯ ವಿರೋಧ ಕಾರ್ಯಕ್ರಮಕ್ಕೆ ನಗರದ ಜನತೆಯಿಂದ ತುಂಬಾ ಪ್ರೋತ್ಸಾಹ, ಬೆಂಬಲಗಳು ದೊರೆತಿವೆ.

ಕೋಲಾರ ಜಿಲ್ಲೆ :

ಕೋಲಾರ ಜಿಲ್ಲೆಯ ಹಲವೆಡೆ ಪೋಲೀಸ್ ದೌರ್ಜನ್ಯ ವಿರೋಧ ಕಾರ್ಯಕ್ರಮ ನಡೆದ ವರದಿಯಾಗಿದೆ. ಕೆ. ಜಿ. ಎಫ್. ನಲ್ಲಿ ಸುಮಾರು 200 ಮಂದಿ ಮೆರವಣಿಗೆ ತೆಗೆದು ಕಾಂ. ಸವರೀದಾಸ್ ಮತ್ತು ಕಾಂ. ಮಣಿ ಅವರ ನೇತೃತ್ವದಲ್ಲಿ ರೋಬರ್ಟ್‌ಸನ್ ಪೇಟೆ ಪೋಲೀಸ್ ಠಾಣೆ ಎದುರು ಧರಣಿ ನಡೆಸಿ ಮನವಿಯನ್ನು ಕೊಡಲಾಯಿತು.

ಶ್ರೀನಿವಾಸಪುರದಲ್ಲಿ ಧರಣಿ ನಡೆಸಿ ಸಬ್ ಇನ್ಸ್‌ಪೆಕ್ಟರವರಿಗೆ ಮನವಿ ಕೊಡಲಾಗಿದೆ. ಚಿಂತಾಮಣಿಯಲ್ಲಿ ನೂರು ಮಂದಿಯು ಧರಣಿ ಸತ್ಯಾಗ್ರಹ ನಡೆದಿದೆ. ಚಿಕ್ಕಬಳ್ಳಾಪುರದಲ್ಲಿ ಎಂಭತ್ತು ಮಂದಿ ಧರಣಿ ನಡೆಸಿ ಡಿ. ವೈ. ಎಸ್. ಪಿ. ಅವರಿಗೆ ಮನವಿಕೊಟ್ಟ ವರದಿಯಾಗಿದೆ. ಶಿಡ್ಲಘಟ್ಟ ಮತ್ತು ಕೋಲಾರಗಳಲ್ಲೂ ಕಾರ್ಯಕ್ರಮ ನಡೆದ ವರದಿ ದೊರೆತಿದೆ.

ಮೈಸೂರು :

ಮೈಸೂರು ನಗರದಲ್ಲಿ ಮುಖ್ಯ ಪೋಲೀಸ್ ಅಧಿಕಾರಿ ಕಛೇರಿ ಎದುರುಗಡೆ ಧರಣಿಕೋರರು ತೆರಳಿದಾಗ ಕಾಂ. ಎಲ್.ಎನ್. ಉಗ್ರಪ್ಪನವರೂ ಸೇರಿದಂತೆ ಇಪ್ಪತ್ತು ಮಂದಿಯನ್ನು ಬಂಧಿಸಿದ ವರದಿಯಾಗಿದೆ. ಸಂಜೆ ಇವರನ್ನು ಬಿಡಲಾಗಿದೆ.

ಹಾಸನ ಜಿಲ್ಲೆ :

ಹಾಸನ ಜಿಲ್ಲೆಯ ಅನೇಕ ಕಡೆಗಳಲ್ಲಿ ಪೋಲೀಸ್ ದೌರ್ಜನ್ಯ ವಿರೋಧಿ ಸಪ್ತಾಹ ಆಚರಿಸಲಾಯಿತು. ಸಪ್ತಾಹದ ಕೊನೆಯ ದಿನವಾದ 31-8-80 ರಂದು ಹಾಸನ ಜಿಲ್ಲೆಯ ಮುಖ್ಯ ಪೋಲೀಸ್ ಅಧಿಕಾರಿಯವರ ಕಛೇರಿ ಎದುರು, ಬೆಳಗ್ಗೆ 11-30 ರಿಂದ ಸಂಜೆ 5ರ ತನಕ ಕಾಂ. ಎ. ಸುಕುಮಾರ್ ಅವರ ನೇತೃತ್ವದಲ್ಲಿ 52 ಮಂದಿ ಧರಣಿ ಸತ್ಯಾಗ್ರಹ ನಡೆಸಿದರು. ಸಕಲೇಶಪುರ ತಾಲ್ಲೂಕು ನೊಂದವರ ಕ್ರಿಯಾಸಮಿತಿಯ ಅಧ್ಯಕ್ಷ ಕೆ. ಜಿ. ಉತ್ತಪ್ಪ ಸಹ ಧರಣಿಯಲ್ಲಿ ಭಾಗವಹಿಸಿದ್ದರು.

ಯಸಳೂರು ಪೋಲೀಸ್ ಠಾಣೆಯ ಮುಂದೆ ಬೆಳಗ್ಗೆ 9-15 ರಿಂದ 2 ಗಂಟೆ ತನಕ ಕಾಂ. ಎಚ್. ಕೆ. ಅಮೀರ್‌ಜಾನ್ ಅವರ ನೇತೃತ್ವದಲ್ಲಿ ಸುಮಾರು 75 ಮಂದಿ ಧರಣಿ ಸತ್ಯಾಗ್ರಹ ನಡೆಸಿದರು.

ಸಕಲೇಶಪುರ ಠಾಣೆಯ ಮುಂದೆ ಬೆಳಗ್ಗೆ 11ರಿಂದ ಸಂಜೆ 4ರ ತನಕ ಕಾಂ. ಪಾಲ್ ಅವರ ನೇತೃತ್ವದಲ್ಲಿ 55 ಜನ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡರು.

ಆಲೂರು ಪೋಲೀಸ್ ಠಾಣೆಯ ಮುಂದೆ ಬೆಳಗ್ಗೆ 11 ರಿಂದ ಮಧ್ಯಾಹ್ನ 1-30ರ ತನಕ ಕಾಂ. ತನಿಯರವರ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ನಡೆಯಿತು.

ಅರೇಹಳ್ಳಿ ಠಾಣೆಯ ಮುಂದೆ ಬೆಳಗ್ಗೆ 11 ರಿಂದ 2-30ರ ವರೆಗೆ ಕಾಂ. ದೂಜರವರ ನಾಯಕತ್ವದಲ್ಲಿ ಸುಮಾರು 75 ಮಂದಿ ಧರಣಿ ಸತ್ಯಾಗ್ರಹ ನಡೆಸಿದರು.

ಮೇಲ್ಕಂಡ ಎಲ್ಲಾ ಕಡೆಗಳಲ್ಲೂ ಧರಣಿ ಸತ್ಯಾಗ್ರಹ ಪ್ರಾರಂಭಿಸುವ ಮೊದಲು ಪೋಲೀಸ್ ದೌರ್ಜನ್ಯವನ್ನು ಖಂಡಿಸುವ ಘೋಷಣೆಗಳೊಂದಿಗೆ ಮೆರವಣಿಗೆಗಳನ್ನು ತೆಗೆಯಲಾಗಿತ್ತು. ಹಾಗೆಯೇ ಎಲ್ಲಾ ಕಡೆಗಳಲ್ಲೂ ಮನವಿ ಅರ್ಪಿಸಲಾಯಿತು.

ಚಿಕ್ಕಮಗಳೂರು ಜಿಲ್ಲೆ :

ಚಿಕ್ಕಮಗಳೂರು ಜಿಲ್ಲೆಯ ಹಲವೆಡೆ ಪೋಲೀಸ್ ದೌರ್ಜನ್ಯ ವಿರೋಧಿ ಸಪ್ತಾಹ ಆಚರಿಸಿದ ವರದಿಯಾಗಿದೆ.

ಕುದುರೆಮುಖ (ಮಲ್ಲೇಶ್ವರ) ದಲ್ಲಿ ಕಾಂ. ರಾಮದಾಸ್ ಮತ್ತು ಕಾಂ. ಕೆ ಬಾಬಣ್ಣನವರ ನೇತೃತ್ವದಲ್ಲಿ ಮೆರವಣಿಗೆ, ಧರಣಿ ಸತ್ಯಾಗ್ರಹ ನಡೆದಿದೆ. ಕಾರ್ಯಕ್ರಮ ಪೂರ್ಣ ಯಶಸ್ವಿಯಾಗಿ ನಡೆದ ವರದಿ ಬಂದಿದೆ.

ಕಳಸದಲ್ಲಿ ಕಾಂ. ಕೆ. ಸುಕುಮಾರ್ ಅವರ ನೇತೃತ್ವದಲ್ಲಿ ಸುಮಾರು 45 ಜನ ಮೆರವಣಿಗೆಯಲ್ಲಿ ಹೋಗಿ ಪೋಲೀಸ್ ಠಾಣೆ ಎದುರು ಧರಣಿ ನಡೆಸಿದರು. ಇವರಲ್ಲಿ 19 ಜನ ಮಹಿಳೆಯರಿದ್ದರು. ಪೋಲೀಸ್ ಅಧಿಕಾರಿಗೆ ಮನವಿಯನ್ನು ಕೊಡಲಾಗಿದೆ.

ಶೃಂಗೇರಿಯಲ್ಲಿ ಕಾಂ. ಕೆ. ಎಂ. ವಿಟ್ಠಲ, ಶ್ರೀನಿವಾಸ ಮೊದಲಾದವರ ನೇತೃತ್ವದಲ್ಲಿ ಯಶಸ್ವಿ ಪ್ರತಿಭಟನಾ ಕಾರ್ಯಕ್ರಮ ನಡೆದುದಾಗಿ ತಂತಿ ಬಂದಿದೆ.

ಜಿಲ್ಲಾ ಕೇಂದ್ರ ಚಿಕ್ಕಮಗಳೂರಿನಲ್ಲಿ ಕಾಂ. ಎ. ಕೆ. ವಿಶ್ವನಾಥ್, ಕಾಂ. ಎಲ್. ವಿ. ಸುಬ್ಬಯ್ಯ ಮತ್ತು ಕಾಂ. ಎಲ್. ವಿ. ಶೇಷಾದ್ರಿ ಯವರ ಮುಖಂಡತ್ವದಲ್ಲಿ ಜಿಲ್ಲಾ ಪೋಲೀಸ್ ಅಧಿಕಾರಿಯವರ ಕಛೇರಿ ಎದುರು ಧರಣಿ ನಡೆಸಿ ಮನವಿ ಅರ್ಪಿಸಲಾಗಿದೆ. ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಚಿಕ್ಕಮಗಳೂರು ಘಟಕದ ಮುಖಂಡರುಗಳಾದ ಕಾಂ. ಜಯರಾಮೇಗೌಡ ಮತ್ತು ಆರ್. ಡಿ. ಮೆಲ್ಕಿಯೋರ್ ರವರ ನೇತೃತ್ವದಲ್ಲಿ ಹತ್ತು ಮಂದಿ ವಿದ್ಯಾರ್ಥಿಗಳೂ ಭಾಗವಹಿಸಿದ್ದರು.

ಶಿವಮೊಗ್ಗ :

ಶಿವಮೊಗ್ಗದಲ್ಲಿ ಬೆಳಗ್ಗೆ 10-30ಕ್ಕೆ ಪುರಸಭಾ ಆವರಣದಿಂದ ಮೆರವಣಿಗೆ ಹೊರಟು, 11 ರಿಂದ ಸಂಜೆ 5ರ ತನಕ ಜಿಲ್ಲಾ ಪೋಲೀಸ್ ಅಧಿಕಾರಿಗಳ ಕಛೇರಿ ಮುಂದೆ ಧರಣಿ ನಡೆಸಲಾಯಿತು. ಕಾಂ. ಚಂದುಕುಟ್ಟಿ ಯವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಕಾಂ. ಎಸ್. ಬಿ ಶಿವಶಂಕರ್, ಡಾ. ಕೃಷ್ಣಾಜಿ, ಕಾಂ. ತಿರುಕಪ್ಪ, ಅಡ್ವೋಕೇಟ್, ಎಲ್. ಲಿಂಗಪ್ಪ (ಕ್ರಾಂತಿ ಭಾರತದ ಸಂಪಾದಕರು) ಮೊದಲಾದವರು ಭಾಗವಹಿಸಿದ್ದರು. ಜಿಲ್ಲಾ ಪೋಲೀಸ್ ಅಧಿಕಾರಿಯವರಿಗೆ ಮನವಿ ಅರ್ಪಿಸಲಾಗಿದೆ.

ಹರಿಹರ :

ಚಿತ್ರದುರ್ಗ ಜಿಲ್ಲೆಯ ಹರಿಹರದಲ್ಲಿ ಆ. 31 ರಂದು ಬೆಳಗ್ಗೆ 6 ಗಂಟೆಯಿಂದ ಸಂಜೆ 6ರ ತನಕ ಸುಮಾರು 50 ಜನರು ಪೋಲೀಸ್ ಠಾಣೆ ಎದುರು ಉಪವಾಸ ಸತ್ಯಾಗ್ರಹ ಮಾಡಿದರು. ಪಕ್ಷದ ಹಿರಿಯ ಮುಖಂಡರುಗಳ ಭಾವ ಚಿತ್ರಗಳಿಂದ ಅಲಂಕೃತವಾದ ಚಪ್ಪರದಲ್ಲಿ ಸತ್ಯಾಗ್ರಹ ನಡೆಯಿತು.

ಸಂಜೆ ಪೋಲೀಸ್ ಅಧಿಕಾರಿಯವರಿಗೆ ಮನವಿ ಕೊಟ್ಟ ಬಳಿಕ ಕಾಂ. ನಾರಾಯಣಸಾರವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಕಾಂ. ಡಿ. ಜಿ. ಜೋಶಿ, ಕಾಂ. ಮದಾರ್ ಸಾಬ್, ಕಾಂ. ಸದಾಶಿವಪ್ಪ ಮತ್ತು ಕಾಂ. ಇಕ್‌ಬಾಲ್ ಹುಸೇನ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ತುಮಕೂರು ಜಿಲ್ಲೆ :

ಕುಣಿಗಲ್ಲಿನಲ್ಲಿ ಆ. 31ರಂದು ರೈತ, ಕೂಲಿಗಾರ ಮತ್ತು ವಿದ್ಯಾರ್ಥಿಗಳ ಮೆರವಣಿಗೆಯು ಪೋಲೀಸ್ ಠಾಣೆಗೆ ತೆರಳಿ ಧರಣಿ ನಡೆಸಿತು. ಸುಮಾರು 150 ಮಂದಿ ಭಾಗವಹಿಸಿದ್ದರು. ಠಾಣೆ ಎದುರು ನಡೆದ ಸಭೆಯಲ್ಲಿ ಕಾಂ. ಅಂಜಪ್ಪ, ಕಾಂ. ಲಿಂಗದೇವರು, ಕಾಂ. ಬಿ. ಜಿ. ಗಂಗಾಧರಯ್ಯ ಮೊದಲಾದವರು ಭಾಷಣ ಮಾಡಿ ಪೋಲೀಸ್ ದೌರ್ಜನ್ಯವನ್ನು ಖಂಡಿಸಿದರು. ನಂತರ ಕಾಂ. ಅಂಜಪ್ಪ, ಕಾಂ. ಲಿಂಗದೇವರು, ಕಾಂ. ಬಡೇಸಾಬ್ ಮತ್ತು ಕಾಂ. ಗಂಗಾಧರಯ್ಯನವರು ಪೋಲೀಸ್ ಠಾಣೆಗೆ ಹೋಗಿ ಡಿ. ವೈ. ಎಸ್. ಪಿ. ಯವರಿಗೆ ಮನವಿ ಕೊಟ್ಟರು.

ಜಿಲ್ಲಾ ಕೇಂದ್ರ ತುಮಕೂರಿನಲ್ಲಿ ಕಾಂ. ಕೆ ಆರ್. ನಾಯಕ್, ಕಾಂ. ಎಚ್. ಸಿ. ಚೆನ್ನಪ್ಪ, ಕಾಂ ಟಿ ಎಲ್. ತಿಮ್ಮಪ್ಪ, ಕಾಂ. ವಜೀರ್, ಕಾಂ. ಮಕಬೂಲ್ ಮತ್ತು ಕಾಂ. ಆರ್. ರವೀಂದ್ರ ನಾಯಕ್‌ರವರೂ ಸೇರಿದಂತೆ ಹಲವರು ಮೆರವಣಿಗೆಯಲ್ಲಿ ಹೋಗಿ ಜಿಲ್ಲಾ ಪೋಲೀಸ್ ಅಧಿಕಾರಿಯವರಿಗೆ ಮನವಿಯನ್ನು ಕೊಟ್ಟರು.

ತಿಪಟೂರಿನಲ್ಲಿ ಕಾಂ ಚೆನ್ನಬಸವಣ್ಣ, ಕಾಂ. ರಾಮಯ್ಯ ಮೊದಲಾದವರ ನೇತೃತ್ವದಲ್ಲಿ ಪೋಲೀಸ್ ಠಾಣೆ ಎದುರು ಪ್ರತಿಭಟನೆ ನಡೆಯಿತು.

ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಲೆಯ ಕೇಂದ್ರ ಕಾರವಾರದಲ್ಲಿ ಮೆರವಣಿಗೆ, ಧರಣಿ ಸತ್ಯಾಗ್ರಹ, ಮನವಿ ಅರ್ಪಣೆ ನಡೆದ ವರದಿಯಾಗಿದೆ. ಹಳಿಯಾಳ ರೈತ ಚಳವಳಿ ಸಂಬಂಧ ಪೋಲೀಸರು ಹಾಕಿದ ಸುಳ್ಳು ಕೇಸನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಲಾಗಿದೆ.

ಸಿರಸಿಯಲ್ಲಿ 24-8-80ರಂದು ಬಹಿರಂಗ ಸಭೆಯು ಜರಗಿ, ಪೋಲೀಸ್ ದೌರ್ಜನ್ಯವನ್ನು ಖಂಡಿಸಲಾಯಿತು. ಕಾಂ. ಪರಶುರಾಮ ಮಸಾಲ್ದಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾಂ. ಮಂಜುನಾಥ ಪುಲ್ಕರ್ ಭಾಷಣ ಮಾಡಿದರು. 25ರಂದು ಸಿರಸಿ ಪೋಲೀಸ್ ಠಾಣೆ ಎದುರು ಮತ್ತು ಎ. ಸಿ. ಕಛೇರಿ ಎದುರು ಬೆಳಗ್ಗೆ 10 ರಿಂದ 12ರ ತನಕ ಧರಣಿ ಸತ್ಯಾಗ್ರಹ ನಡೆಸಲಾಯಿತು. ಉಳಿದೆಡೆಗಳಲ್ಲೂ ಕಾರ್ಯಕ್ರಮ ನಡೆದ ಸುದ್ದಿ ಬಂದಿದೆ.

ಬಿಜಾಪುರ

ಬಿಜಾಪುರದಲ್ಲಿ ನೂರಾರು ಕಾರ್ಮಿಕರು ಮತ್ತು ರೈತರು 1-9-80ರಂದು ಜಿಲ್ಲಾ ಪೋಲೀಸ್ ಅಧಿಕಾರಿ ಕಛೇರಿ ಎದುರು ಧರಣಿ ನಡೆಸಿದರು. ಕಾಂ. ಎನ್. ಕೆ. ಉಪಾಧ್ಯಾಯ, ಕಾಂ. ಎಲ್. ಬಿ ಲಾಯದಗುಂದಿ ಮೊದಲಾದವರು ಮಾತನಾಡಿ ಪೋಲೀಸ್ ದೌರ್ಜನ್ಯವನ್ನು ಖಂಡಿಸಿದರು. ಜಿಲ್ಲಾ ಪೋಲೀಸ್ ಅಧಿಕಾರಿಗೆ ಮನವಿ ಒಪ್ಪಿಸಲಾಯಿತು.

ದ. ಕ. ಜಿಲ್ಲೆ

ದ. ಕ ಜಿಲ್ಲಾ ಕೇಂದ್ರ ಮಂಗಳೂರಲ್ಲಿ 29-8-80ರಂದು ನೂರಾರು ಜನ ಕಾರ್ಮಿಕರು. ಜಿಲ್ಲಾ ಪೋಲೀಸ್ ಅಧಿಕಾರಿ ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿ, ಮನವಿಯನ್ನು ಕೊಟ್ಟ ವರದಿ ಆಗಿದೆ. ಕಾಂ. ರಾಮಚಂದ್ರರಾವ್, ಕಾಂ ಕೆ. ಆರ್. ಶ್ರೀಯಾನ್ ಮತ್ತು ಇನ್ನಿತರ ಮುಖಂಡರು ಭಾಗವಹಿಸಿದ್ದರು.

ಬಂಟ್ವಾಳದ ಬಡ್ಡಕಟ್ಟೆಯಲ್ಲಿ 28-8-80 ರಂದು ಕಾಂ. ಬಿ ಎಚ್. ಬಂಗೇರ ಅವರ ಅಧ್ಯಕ್ಷತೆಯಲ್ಲಿ ಬಹಿರಂಗಸಭೆ ನಡೆಸಿ, ಪೋಲೀಸ್ ದೌರ್ಜನ್ಯವನ್ನು ಖಂಡಿಸಲಾಯಿತು. ಕಾಂ. ವಾಸುಗಟ್ಟಿ, ಕಾಂ ಶ್ರೀಯಾನ್, ಕಾಂ. ಜನಾರ್ಧನ ನಾಯ್ಕ ಮೊದಲಾದವರು ಮಾತನಾಡಿದರು. ಸಭೆಗೆ ಮೊದಲು ದೊಡ್ಡ ಮೆರವಣಿಗೆ ನಡೆಯಿತು.

ಕೊಡಗು ಜಿಲ್ಲೆ

ಆ. 31 ರಂದು ವಿರಾಜಪೇಟೆಯಲ್ಲಿ ಸುಮಾರು 25 ಜನ ಮಳೆಗೆ ತೊಯ್ದುಕೊಂಡೇ ಪೋಲೀಸ್ ಠಾಣೆ ಎದುರು ಸತ್ಯಾಗ್ರಹ ನಡೆಸಿದರು. ಸಂಜೆ ಸುಮಾರು 70 ಜನ ಪಂಜಿನ ಮೆರವಣಿಗೆ ನಡೆಸಿದರು.

ಸಿದ್ದಾಪುರದಲ್ಲಿ ಸುಮಾರು 350 ಜನರು ಪೋಲೀಸ್ ಠಾಣೆ ಎದುರು ಧರಣಿ ಸತ್ಯಾಗ್ರಹ ನಡೆಸಿದರು, ಸಂಜೆ ಪಂಜಿನ ಮೆರವಣಿಗೆಯನ್ನೂ ನಡೆಸಲಾಯಿತು.

ಚೆಟ್ಟಳ್ಳಿಯಲ್ಲಿ ಪ್ರತಿಭಟನಾ ಮೆರವಣಿಗೆ ಮತ್ತು ಸತ್ಯಾಗ್ರಹ ನಡೆಸಲಾಯಿತು.

ಸುಂಟಿಕೊಪ್ಪದಲ್ಲಿ ರೈತ ಕಾರ್ಮಿಕರ ಮೆರವಣಿಗೆ, ಧರಣಿ ಸತ್ಯಾಗ್ರಹ ನಡೆಸಲಾಯಿತು.

ಕುಟ್ಟದಲ್ಲಿ ರೈತ, ಕಾರ್ಮಿಕ, ಯುವಜನರ ಮೆರವಣಿಗೆ, ಧರಣಿ ಸತ್ಯಾಗ್ರಹ ನಡೆಯಿತು. ಕಾಂ. ರಾಯನ್ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ 300 ಜನ ಭಾಗವಹಿಸಿದ್ದರು.

ಇತರೆಡೆಗಳಲ್ಲಿ

ಗುಲಬರ್ಗ ಜಿಲ್ಲೆ, ರಾಯಚೂರು ಜಿಲ್ಲೆ, ಧಾರವಾಡ ಜಿಲ್ಲೆ, ಹಾಗೂ ಇತರೆಡೆಗಳಲ್ಲಿ ಕಾರ್ಯಕ್ರಮ ನಡೆದ ಸುದ್ದಿ ಬಂದಿದೆ. ವಿವರ ದೊರೆತಿಲ್ಲ. ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಕಾರ್ಯಕ್ರಮ ನಡೆಸದಂತೆ ಪೋಲೀಸರು ಸೆಕ್ಷನ್ ಜಾರಿಮಾಡಿದ ವರದಿಯಾಗಿದೆ.

ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡ ಬೆಳವಂಗಳದಲ್ಲಿ ನೂರಾರು ರೈತರು ಮೆರವಣಿಗೆ ನಡೆಸಿ, ಪೋಲೀಸ್ ಅಧಿಕಾರಿಗೆ ಮನವಿ ಒಪ್ಪಿಸಿದ ವರದಿಯಾಗಿದೆ. ಕಾಂ. ಮುಗುವಾಳಪ್ಪ, ಕಾಂ. ರಾಮಭದ್ರಯ್ಯ ಮೊದಲಾದವರು ಭಾಗವಹಿಸಿದ್ದರು.

●

ಚಂದಾ ವಿವರ

ಬಿಡಿಪ್ರತಿ	:	50 ಪೈಸೆ
6 ತಿಂಗಳಿಗೆ	:	13 ರೂ.
ಒಂದು ವರ್ಷಕ್ಕೆ	:	25 ರೂ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT